ಜೂನ್ 2017, ಸಂಚಿಕೆ 2

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

# ಲೀಸಾ ಇಂಡಿಯ

ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**
**ಜೂನ್ 2017, ಸಂಚಿಕೆ 2**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.

**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಅಡಿ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ +91–080–26699512/26699522
ಫ್ಯಾಕ್ಸ್ +91–080–26699410
ಈಮೈಲ್ leisaindia@yahoo.co.in

**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್
**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ
**ಕನ್ನಡ ಅನುವಾದ**
ಮಿತ್ರಮಾಧ್ಯಮ, ಬೆಂಗಳೂರು
**ಕನ್ನಡ ಅನುವಾದಗಳ ಸಮನ್ವಯ**
ಪೂರ್ಣಿಮಾ
**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.
**ಪುಟ ವಿನ್ಯಾಸ**
ಬೇಳೂರು ಸುದರ್ಶನ
**ಮುದ್ರಣ**
ಸ್ವಾನ್ ಪ್ರಿಂಟ್, ಬೆಂಗಳೂರು
**ಮುಖಪುಟ ಚಿತ್ರ**
ಮುಕ್ಕಾಲ್ ಗ್ರಾಮದಲ್ಲಿ ಜೋಳದ ಬೆಳೆ ತೆಗೆಯುತ್ತಿರುವ ಬಸವ್ವ ಉಪ್ಪಾರ ಮತ್ತು ಮಲ್ಲಿಕಾರ್ಜುನಗೌಡ ಪಾಟೀಲ
**ಚಿತ್ರ ಸೌಜನ್ಯ:** ಎ.ಎಂ.ಇ.ಎಫ್

## ಲೀಸಾ ಮ್ಯಾಗಜೀನ್

**ವಿವಿಧ ಆವೃತ್ತಿಗಳು**
ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಜೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು

**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**

ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ

# ಪ್ರಿಯ ಓದುಗರೇ.

**ಜೂನ್ 2017ರ ಈ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಮಗೆ ಸಂತಸವಾಗುತ್ತಿದೆ. ಈ ಸಂಚಿಕೆಯು ಆಹಾರಗಳ ಪೌಷ್ಟಿಕತೆಯ ಮೌಲ್ಯದ ಬಗ್ಗೆ ಮತ್ತು ಸಾಗುವಳಿ ಮಾಡದ ಆಹಾರಗಳು ಜನರ ಆಹಾರ ಪದ್ಧತಿಯಲ್ಲಿ ಹೊಂದಿರುವ ಸ್ಥಾನದ ಬಗ್ಗೆ ಬೆಳಕು ಚೆಲ್ಲಿದೆ. ಅಲ್ಲದೆ ಸುರಕ್ಷಿತ ಆಹಾರ ಮತ್ತು ಸುರಕ್ಷಿತ ಕೃಷಿಯನ್ನು ಭಾರೀ ಪ್ರಮಾಣದಲ್ಲಿ ಉತ್ತೇಜಿಸುವಲ್ಲಿ ಬಹು–ಭಾಗೀದಾರರ ಭಾಗಿತ್ವದ ಅಗತ್ಯವನ್ನು ಒತ್ತಿ ಹೇಳಿದೆ.**

**ತಮಿಳುನಾಡಿನ ಇಡೀ ಹಳ್ಳಿಯೊಂದು ತನ್ನ ಆಹಾರ ಪದ್ಧತಿಯಲ್ಲಿ ಪೌಷ್ಟಿಕತೆಯನ್ನು ಸುಧಾರಿಸಿಕೊಳ್ಳಲೆಂದು ಬೇಳೆಗಳನ್ನು ವ್ಯಾಪಕ ಪ್ರಮಾಣದಲ್ಲಿ ಬೆಳೆಯಲು ಮುಂದಾಯಿತು ಎಂಬುದನ್ನು ಬೇಳೆ ಪಂಚಾಯತ್ ಲೇಖನ ವಿವರಿಸುತ್ತದೆ. ಸುಸ್ಥಿರ ಉತ್ಪಾದನೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ರೂಪಿಸುವಲ್ಲಿ ಬೇಳೆ ಪಂಚಾಯತ್ ಒಂದು ಏಕೀಕೃತ ವಿಧಾನವಾಗಿದೆ. ಇದನ್ನು ಕೃಷಿ ಉತ್ಪನ್ನ ಸಂಸ್ಥೆಯೊಂದು ಜಾರಿಗೆ ತಂದಿದೆ. ಹಾಗೆಯೇ ಕರ್ನಾಟಕದ ರೈತ ಆಂಜನೇಯರಿಂದ ಸ್ಫೂರ್ತಿ ಪಡೆದು ಕೃಷಿ ಇಲಾಖೆಯು ಉತ್ಪಾದನಾ ವೆಚ್ಚವನ್ನು ತಗ್ಗಿಸುವ ಮತ್ತು ಹೆಚ್ಚಿನ ಮಣ್ಣು ಇಂಗಾಲದಿಂದ ಮಣ್ಣಿನ ಫಲವತ್ತತೆ ಹೆಚ್ಚಿಸುವ ದ್ವಿದಳ ಧಾನ್ಯದ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಂಡಿತು. ಸಾಗುವಳಿ ಮಾಡದ ಆಹಾರ ಬೆಳೆಗಳ ಕುರಿತ ಲೇಖನವು ಒರಿಸ್ಸಾದ ಆದಿವಾಸಿ ಸಮುದಾಯವು ತಮಗೆ ಕೇವಲ ಆಹಾರವನ್ನಷ್ಟೇ ನೀಡದೆ ವಿವಿಧ ಪೌಷ್ಟಿಕ ಅಂಶಗಳನ್ನೂ ಒದಗಿಸುವ ಕಾಡು ಆಹಾರಗಳ ಮೇಲೆ ಅವಲಂಬಿತರಾದ ಬಗ್ಗೆ ಮಾಹಿತಿ ನೀಡುತ್ತದೆ. ಈ ಸಂಚಿಕೆಯಲ್ಲಿರುವ ಲೇಖನಗಳು ಕುರಿದನಗಾಹಿ ಸಮುದಾಯಗಳು ಹುಲ್ಲುಗಾವಲುಗಳ ಮೇಲಿನ ತಮ್ಮ ಹಕ್ಕುಗಳನ್ನು ಹೇಗೆ ರಕ್ಷಿಸಿಕೊಳ್ಳುತ್ತಿದ್ದಾರೆ ಮತ್ತು ಬಹು–ಸಾಂಸ್ಥಿಕ ವಿಧಾನಗಳ ಮೂಲಕ ಸಾವಯವ ಕೃಷಿಯನ್ನು ಮುಖ್ಯವಾಹಿನಿ ಸಂಸ್ಥೆಗಳು ಉತ್ತೇಜಿಸುವಲ್ಲಿ ಹೆಚ್ಚಿನ ಪಾತ್ರ ನಿರ್ವಹಿಸುತ್ತಿರುವ ಬಗ್ಗೆಯೂ ಗಮನ ಹರಿಸಿವೆ.**

**ನಿಮ್ಮ ಪ್ರತಿಕ್ರಿಯೆಯನ್ನು ನಾವು ನಿರೀಕ್ಷಿಸಿದ್ದೇವೆ. ಈ ಸಂಚಿಕೆಯನ್ನು ನಿಮ್ಮ ಯಾವುದೇ ಕೃಷಿ ಮಿತ್ರರು ಓದಬೇಕು ಎಂದು ನೀವು ಬಯಸಿದರೆ, ಅವರ ಸಂಪೂರ್ಣ ಅಂಚೆ ವಿಳಾಸವನ್ನು ನಮಗೆ ಕಳಿಸಿಕೊಡಿ. ಅವರಿಗೆ ಸಂಚಿಕೆಯನ್ನು ಕಳಿಸಿಕೊಡಲು ನಮಗೆ ಸಂತಸವಾಗುತ್ತದೆ.**

**– ಸಂಪಾದಕರು**

## ಲೀಸಾ www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.

**ವಿಶ್ವಸ್ಥರು**
**ಚೇರ್‌ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.,)
**ಖಜಾಂಚಿ** : ಶ್ರೀ ಬಿ.ಕೆ. ಶಿವರಾಂ
**ಸದಸ್ಯರು** : ಡಾ.ವಿಠಲ ರಾಜನ್, ಡಾ.ಎಂ.ಮಹಾದೇವಪ್ಪ, ಡಾ.ಎನ್.ಜಿ.ಹೆಗಡೆ, ಡಾ.ಟಿ.ಎಂ. ತ್ಯಾಗರಾಜನ್, ಪ್ರೊ.ವಿ.ವೀರಭದ್ರಯ್ಯ, ಡಾ.ಎ.ರಾಜಣ್ಣ, ಡಾ.ವೆಂಕಟೇಶ್ ತಗತ್, ಡಾ.ಸ್ಮಿತಾ ಪ್ರೇಮಚಂದರ್
**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್

## ಮಿಸೊರಿಯೊರ್ MISEREOR www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್ ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ


**ಸಾಗುವಳಿ ಮಾಡದ ಆಹಾರಗಳಿಗೆ ಮೌಲ್ಯ ನೀಡುವುದು**

■ **ದೇಬ್‌ಜೀತ್ ಸಾರಂಗಿ**

ಹವಾಮಾನ ವೈಪರೀತ್ಯಗಳ ಯುಗದಲ್ಲಿ ಕಾಡುಗಳ ಸರಕೀಕರಣ, ಅವನ್ನು ಕೇವಲ 'ಇಂಗಾಲದ ಸಂಗ್ರಹ'ಗಳಾಗಿ ಮಾಡಿ ಕೆಡುಕಿನ ಪರಿಸ್ಥಿತಿ ನಿರ್ಮಿಸಿದೆ. ಕಾಡುಗಳು ಉತ್ತಮ ಆಹಾರ ಸಂಗ್ರಹಾಗಾರಗಳು ಕೂಡ, ಅನೇಕ ಗ್ರಾಮೀಣ ಸಮುದಾಯಗಳು ತಮ್ಮ ದೈನಂದಿನ ಅವಶ್ಯಕತೆಗಳಿಗೆ ಅದರ ಮೇಲೆ ಅವಲಂಬಿತವಾಗಿದೆ. ಸೂಕ್ತ ಬೆಂಬಲ ನೀಡಿದಲ್ಲಿ, ವಿಶೇಷವಾಗಿ ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ, ಸಾಗುವಳಿ ರಹಿತ ಆಹಾರಗಳು ಆಹಾರ ಅಭದ್ರತೆಗೆ ಪರಿಹಾರವಾಗಬಲ್ಲದು. 4

**ಕೃಷಿ ಪರಿಸರ ವಿಧಾನಗಳ ಹರಡುವಿಕೆ** 6

■ **ಮಂಜುನಾಥ ಹೊಳಲು**

**ಏಕವ್ಯಕ್ತಿ ಅಭಿಯಾನ!: ಕೃಷಿ ಪರಿಸರಶಾಸ್ತ್ರ ಕುರಿತು ಜಾಗೃತಿ ಮಾಡುತ್ತಿರುವ ರೈತ ಶಿಕ್ಷಕ**

■ **ಟಿ.ಎಂ.ರಾಧ**

ಕ್ಷೇತ್ರದಲ್ಲಿ ಕೃಷಿ ಪರಿಸರಶಾಸ್ತ್ರದ ಕುರಿತು ನಿರಂತರವಾಗಿ ಜ್ಞಾನ ಅರಳುತ್ತಿದೆ– ಮತ್ತು, ಜ್ಞಾನದ ಸಹನಿರ್ಮಾಣ ಮತ್ತು ಪ್ರಸಾರದಲ್ಲಿ ರೈತರು ಬಹುಮುಖ್ಯ ಪಾತ್ರ ವಹಿಸುತ್ತಾರೆ. ಕೃಷಿ ಪರಿಸರಶಾಸ್ತ್ರದ ಕುರಿತು ಗಾಢಾನುರಕ್ತಿ ಹೊಂದಿರುವ ಇಲ್ಲೊಬ್ಬ ಶಿಕ್ಷಕ ಹಾಗೂ ರೈತ, ರೈತರ ಜಾಲಗಳಂತಹ ಸ್ಥಳೀಯ ರೈತವೇದಿಕೆಗಳ ಮೂಲಕ ಆ ಕುರಿತು ರೈತರಲ್ಲಿ ಪ್ರೇರಣೆ ನೀಡುತ್ತಿದ್ದಾರೆ. 7

**ಕ್ಷೀರ ಆರ್ಥಿಕತೆ ಮತ್ತು ಅದರ ಪರಿಸರ ಪದ್ಧತಿ ಪುನಶ್ಚೇತನಗೊಳಿಸಲು ನೆರವು**

■ **ರಮೇಶ್ ಭಟ್ಟ ಮತ್ತು ಶೌರ್ಯಮೊಯ್ ದಾಸ್**

ಸ್ಥಳೀಯ ಎಮ್ಮೆ ತಳಿ ಮತ್ತು ಪರಿಸರ ಪದ್ಧತಿಗಳನ್ನು ಸಂರಕ್ಷಿಸಲು, ಕೆಲವು ಸಂಘಟನೆಗಳು ಒಟ್ಟಾಗಿ ಗೋಪಾಲಕರ ನೆರವಿಗೆ ಬಂದಿವೆ. ಅವರ ಪಾಲುದಾರಿಕೆ, ಲಾಭದಾಯಕ ಡೈರಿ ಮಾರುಕಟ್ಟೆಗೆ ಪ್ರವೇಶ ಪಡೆಯುವಲ್ಲಿ ಸಮುದಾಯಗಳಿಗೆ ಸಹಾಯ ಮಾಡಿದೆ. ಈಗ, ಅವರು ಆಡಳಿತದ ಹಕ್ಕನ್ನು ಪಡೆಯಲು ಕೂಡ ಸಮುದಾಯಗಳ ಜೊತೆಯಲ್ಲಿದ್ದಾರೆ. ಮುಖ್ಯ ಭಾಗೀದಾರ ಎನ್ನಿಸಿಕೊಂಡಿರುವ ಸರ್ಕಾರ, ಅವರ ಮಾತುಗಳನ್ನು ಕೇಳಿಸಿಕೊಳ್ಳಬೇಕಾಗಿದೆ. 10

**ಸಾವಯವ ಕೃಷಿ ಉತ್ತೇಜನಕ್ಕೆ ಒಟ್ಟಾಗಿ ಬಂದ ಸಂಸ್ಥೆಗಳು**

■ **ಎಸ್.ವಲ್ಲಾಳ್ ಕಣ್ಣನ್, ಪಿ.ಆನಂದಪ್ರಿಯ ಮತ್ತು ಪಿ.ತಮಿಳ್‌ಸೆಲ್ವಿ**

ಮುಖ್ಯವಾಹಿನಿಯ ಕೃಷಿ ಸಂಸ್ಥೆಗಳು ಸಹಯೋಗದ ಉಪಕ್ರಮದ ಮೂಲಕ ಸಾವಯವ ಕೃಷಿಗೆ ಉತ್ತೇಜನ ನೀಡುತ್ತಿವೆ. ಕರೂರ್‌ನಲ್ಲಿನ ಕೃಷಿ ವಿಜ್ಞಾನ್ ಕೇಂದ್ರ, ಬಹು ಸಂಸ್ಥೆಗಳ ಮೂಲಕ ಅದು ಮಾಡಿದ ಪ್ರಯತ್ನ, ಕರೂರು ಜಿಲ್ಲೆಯ ರೈತರು ಸಾವಯವ ವಿಧಾನದ ಕೃಷಿಯೆಡೆಗೆ ವಾಲಲು ಸಹಾಯವಾಯಿತು. ಅದರಿಂದಾಗಿ, ಅವರಲ್ಲಿ ಆತ್ಮವಿಶ್ವಾಸ ತುಂಬಿದ್ದೇ ಅಲ್ಲದೆ, ಅವರ ಒಟ್ಟು ಆದಾಯ ಮತ್ತು ಕೃಷಿ ಉದ್ಯೋಗವನ್ನು ಹೆಚ್ಚಿಸಿದೆ. 13

**ಬೇಳೆ ಪಂಚಾಯತ್ : ಬೇಳೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುತ್ತ**

■ **ಆರ್.ಎಸ್.ಶಾಂತಕುಮಾರ್ ಹೋಪರ್ ಮತ್ತು ಕೆ.ದಚಿನಾಮೂರ್ತಿ**

ಸುಸ್ಥಿರ ಉತ್ಪಾದನೆ, ಮೌಲ್ಯವರ್ಧನೆ ಮತ್ತು ಮಾರ್ಕೆಟಿಂಗ್ ವ್ಯವಸ್ಥೆಗಳ ಸ್ಥಾಪನೆಗೆ ಸಮಗ್ರ ವಿಧಾನವೇ ಪಲ್ಸ್ ಪಂಚಾಯತ್ ಅಥವಾ ಬೇಳೆ ಪಂಚಾಯಿತ್. ತಮಿಳುನಾಡಿನ ಕೃಷಿ ಉತ್ಪನ್ನ ಕಂಪನಿ ಅನುಷ್ಠಾನಗೊಳಿಸಿದ ಈ ಉಪಕ್ರಮ, ಬೇಳೆ ಉತ್ಪಾದನೆಯ ಸ್ವಾವಲಂಬನೆಯೆಡೆಗೆ ಸಾಗುತ್ತಿದೆ. 16

# ಸಾಗುವಳಿ ಮಾಡದ ಆಹಾರಗಳಿಗೆ ಮೌಲ್ಯ ನೀಡುವುದು

**ಹವಾಮಾನ ವೈಪರೀತ್ಯಗಳ ಯುಗದಲ್ಲಿ ಕಾಡುಗಳ ಸರಕೀಕರಣ, ಅವನ್ನು ಕೇವಲ 'ಇಂಗಾಲದ ಸಂಗ್ರಹ'ಗಳಾಗಿ ಮಾಡಿ ಕೆಡುಕಿನ ಪರಿಸ್ಥಿತಿ ನಿರ್ಮಿಸಿದೆ. ಕಾಡುಗಳು ಉತ್ತಮ ಆಹಾರ ಸಂಗ್ರಹಾಗಾರಗಳು ಕೂಡ, ಅನೇಕ ಗ್ರಾಮೀಣ ಸಮುದಾಯಗಳು ತಮ್ಮ ದೈನಂದಿನ ಅವಶ್ಯಕತೆಗಳಿಗೆ ಅದರ ಮೇಲೆ ಅವಲಂಬಿತವಾಗಿದೆ. ಸೂಕ್ತ ಬೆಂಬಲ ನೀಡಿದಲ್ಲಿ, ವಿಶೇಷವಾಗಿ ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ, ಸಾಗುವಳಿ ರಹಿತ ಆಹಾರಗಳು ಆಹಾರ ಅಭದ್ರತೆಗೆ ಪರಿಹಾರವಾಗಬಲ್ಲದು.**



ಅರಣ್ಯ ಉತ್ಪನ್ನಗಳು ಬುಡಕಟ್ಟು ವಸತಿಗಳ ಆಹಾರದ ಗಮನಾರ್ಹ ಅಂಶ

■ **ದೇಬ್‌ಜೀತ್ ಸಾರಂಗಿ**

ಅರಣ್ಯಗಳು ಖಾದ್ಯ ಪುಷ್ಪಗಳು, ಹಣ್ಣುಗಳು, ಎಲೆಗಳು, ಬೀಜಗಳು, ಅಣಬೆಗಳು, ಬಿದಿರಿನ ಚಿಗುರು, ಬೇರುಗಳು ಮತ್ತು ಗೆಡ್ಡೆಗಳು, ಪಕ್ಷಿಗಳು, ಜೇನುತುಪ್ಪ ಮತ್ತು ಖಾದ್ಯ ಕೀಟಗಳು ಇತ್ಯಾದಿ ಸಾಗುವಳಿ ಮಾಡದ ಆಹಾರಗಳ ಶ್ರೀಮಂತ ಸಂಪನ್ಮೂಲವಾಗಿವೆ. ರಾಯಗಡ ಜಿಲ್ಲೆಯ ಬಹಳಷ್ಟು ಆದಿವಾಸಿಗಳು ಒಂದು ವರ್ಷದಲ್ಲಿ 30ಕ್ಕೂ ಹೆಚ್ಚು ಬೆಳೆಗಳನ್ನು ಬೆಳೆದರೂ, ಅರಣ್ಯ ವೈವಿಧ್ಯದ ಮೇಲೆ ಅವರು ವಿಶ್ವಾಸವಿಡುತ್ತಾರೆ. ಅಂತಹ ಒಬ್ಬ ರೈತ ಆದಿ, 'ನಾವು ಅರಣ್ಯಕ್ಕೆ ಎಂದೂ ಸಮನಾಗಲು ಸಾಧ್ಯವಿಲ್ಲ. ನಾವು 40 ವಿಧದ ಬೆಳೆಗಳನ್ನು ಬೆಳೆದರೂ ಅರಣ್ಯದಲ್ಲಿ 200 ವಿಧದ ಆಹಾರಗಳು ಲಭ್ಯವಿದೆ' ಎನ್ನುತ್ತಾರೆ. ಅರಣ್ಯಗಳಲ್ಲಿ ಬೇಸಿಗೆಯಲ್ಲಿ ಹಣ್ಣುಗಳು ಸೇರಿದಂತೆ ಅನೇಕ ರೀತಿಯ ಆಹಾರಗಳು ಉತ್ಪತ್ತಿಯಾಗುತ್ತವೆ, ಮುಂಗಾರು ಮಳೆಯಿಂದ ಬಿದಿರು ಚಿಗುರೊಡೆಯುತ್ತವೆ ಮತ್ತು ಅಣಬೆಗಳು ಬೆಳೆದರೆ, ಚಳಿಗಾಲದ ಅರಣ್ಯದಲ್ಲಿ ನಾನಾ ರೀತಿಯ ಗೆಡ್ಡೆಗಳು. ತಡಿಂಗ್‌ಪೈ ಗ್ರಾಮದ ಹಿರಿಯ ಆದಿವಾಸಿ ಮಹಿಳೆ ಪಾರ್ಬತಿ ಪುಸಿಕಾ, 'ಅರಣ್ಯವೇ ನಮ್ಮ ತಾಯಿ. ಬೇರುಗಳು ಮತ್ತು ಬಂಬೂ ಚಿಗುರುಗಳು, ಅಡಿಗೆಗೆ ಬಳಸಬಹುದಾದ ಸೊಪ್ಪು ಮತ್ತು ಜೇನು, ಅತ್ಯಂತ ಭೀಕರ ಬರದಲ್ಲೂ ನಮ್ಮ ಹಳ್ಳಿಯಲ್ಲಿ ಮೂರು ತಿಂಗಳ ಕಾಲ ಜನರನ್ನು ಸುಸ್ಥಿರವಾಗಿಟ್ಟಿತ್ತು' ಎನ್ನುತ್ತಾರೆ.

ಮನೆಯ ಆಹಾರದ ಅಗತ್ಯಗಳಿಗೆ ನೆರವಾಗುವುದಲ್ಲದೆ, ಈ ಸಾಗುವಳಿಯೇತರ ಆಹಾರ ಪದಾರ್ಥಗಳು ಮನೆಯ ಪೂರಕ ಆದಾಯಗಳಾಗಿವೆ. 'ಮನೆಯಲ್ಲಿ ಹಣವಿಲ್ಲದೆ ಹೋದಾಗ, ಕಾಡಿನಲ್ಲಿ ಬೆಳೆಯುವ ಹುಣಸೆಯನ್ನು ತೆಗೆದುಕೊಂಡು ಹೋಗಿ ಮಾರಿ, ಮಾರುಕಟ್ಟೆಯಿಂದ ಉಪ್ಪು ಅಥವಾ ಎಣ್ಣೆ ತರುತ್ತೇವಿ' ಎಂದು ಆದಿ ಹೇಳುತ್ತಾರೆ. ಅರಣ್ಯ ಆಹಾರಗಳು ಅವರಿಗೆ ಸ್ವಾತಂತ್ರ್ಯದ ಅನುಭೂತಿ, ಘನತೆ ಮತ್ತು ಗೌರವ ತಂದುಕೊಟ್ಟಿದೆ. ಅದೆಲ್ಲಕ್ಕಿಂತ ಮಿಗಿಲಾಗಿ, ಲೇವಾದೇವಿಗಾರರ ಕಪಿಮುಷ್ಠಿಯಲ್ಲಿ ಬೀಳುವುದನ್ನು ತಪ್ಪಿಸಿದೆ.

ಸಂಕುಚಿತವಾಗಿ ವ್ಯಾಖ್ಯಾನಿಸಿದ ಪ್ರದೇಶಗಳಲ್ಲಿ ಕೆಲವು ಆಯ್ದ ಬೆಳೆಗಳನ್ನು ಬೆಳೆಯುವುದು ಕೃಷಿ ವಿಜ್ಞಾನದ ಉದ್ದೇಶ ಎನ್ನುವ ಚಿಂತನೆಯನ್ನು ನಾವು ಒಪ್ಪಿಕೊಳ್ಳಬಹುದೇ? ಸಾಗುವಳಿ ಜಮೀನಿನ ಸುತ್ತಲೂ, ಮಧ್ಯೆದಲ್ಲಿನ ಪ್ರದೇಶ, ಹುಲ್ಲುಗಾವಲು, ಅರಣ್ಯ ಪ್ರದೇಶ, ನೀರಿರುವ ಪ್ರದೇಶ ಮತ್ತು ಮನೆಗಳು ಇರುವ ಪ್ರದೇಶವನ್ನು ಇದರಿಂದ ನಾವು ಹೊರಗಿಡಬೇಕೇ? 'ಆಹಾರ ಉತ್ಪಾದನೆ' ಮತ್ತು 'ಸಾಗುವಳಿ' ಸಮಾನಾರ್ಥಕ ಪದವೇ? ಆಹಾರ ಎಂದರೆ, ಸಂಗ್ರಹ ಮತ್ತು ಸಂರಕ್ಷಣೆ ಕುರಿತೂ ಸೇರಿದೆ ಎನ್ನುತ್ತದೆ ಲಿವಿಂಗ್ ಫಾರ್ಮ್ಸ್.

ಒರಿಸ್ಸಾದ ರಾಯಗಡ ಜಿಲ್ಲೆಯ ಹಳ್ಳಿಗಳಲ್ಲಿ, ಮನೆಯ ಆಹಾರಕ್ರಮದಲ್ಲಿ ಅರಣ್ಯ ಆಹಾರಗಳ ಪಾತ್ರ ಏನು ಎಂದು ತಿಳಿದುಕೊಳ್ಳಲು, ಲಿವಿಂಗ್ ಫಾರ್ಮ್ಸ್ 2013ರಲ್ಲಿ ಒಂದು ಸಮೀಕ್ಷೆ ನಡೆಸಿತು. 2013ರ ಜುಲೈ ಕಡೆಯ ವಾರದಿಂದ ಡಿಸೆಂಬರ್‌ವರೆಗೆ 121 ವಿವಿಧಬಗೆಯ ಅರಣ್ಯ ಆಹಾರಗಳು ಬೆಳೆಯುತ್ತವೆ ಎನ್ನುವುದನ್ನು ಅಧ್ಯಯನ ದಾಖಲಿಸಿತು. 21ರಿಂದ 69 ವಿವಿಧ ರೀತಿಯ ಆಹಾರಗಳಲ್ಲಿ ಪ್ರತಿ ಮನೆಗೆ ಸರಾಸರಿ 4.56 ಕೆ.ಜಿ ಯಷ್ಟು ಬೆಳೆಯುತ್ತಿತ್ತು. ಪ್ರತಿ ಮನೆಯ ಆಹಾರ ಕ್ರಮದಲ್ಲಿ ಪ್ರತಿ ನಿತ್ಯ 0.725 ಕೆ.ಜಿಯಷ್ಟು ಆಹಾರ ಬಳಕೆಯಾಗುತ್ತಿದ್ದು, ಇದು ಆ ಹಳ್ಳಿಗಳಲ್ಲಿ ಬೇಯಿಸಿದ ಆಹಾರದ ಶೇ.12ರಿಂದ ಶೇ.24.4ರಷ್ಟು ಪ್ರಮಾಣವನ್ನು ಹೊಂದಿತ್ತು. ಹಳ್ಳಿಯ ಗುಣವೈಶಿಷ್ಟ್ಯ ಹಾಗೂ ಅರಣ್ಯದ ಸಂಯೋಜನೆ, ಪ್ರಮಾಣ ಮತ್ತು ಜೈವಿಕ ವೈವಿಧ್ಯತೆಗನುಸಾರ ಆ ಸಮುದಾಯಗಳ ಅರಣ್ಯದ ಮೇಲಿನ ಅವಲಂಬನೆ ಶೇ.20ರಿಂದ ಶೇ. 50ರಷ್ಟಿತ್ತು.

ಅರಣ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗಿದ್ದು ವಿವಿಧ ರೀತಿಯ ಗೆಡ್ಡೆಗಳು. ಅಂತಹ ಒಂದು ಗೆಡ್ಡೆ 'ಕೇಟಾ' ಬರಪರಿಸ್ಥಿತಿಯಲ್ಲಿನ ಆಹಾರವಾಗಿ ಸ್ಥಳೀಯ ಸಮುದಾಯಕ್ಕೆ ಮಹತ್ವದ್ದು. 'ಪಿಟಾ–ಕೊಂಡ' ಗೆಡ್ಡೆಯನ್ನು 4–5 ತಿಂಗಳವರೆಗೆ ಸಂಗ್ರಹಿಸಿಟ್ಟುಕೊಳ್ಳಬಹುದು. ಬರಗಾಲದಲ್ಲಿ, ಸಾಗುವಳಿ ಮಾಡಿದ ಬೆಳೆಗಳು ವಿಫಲಗೊಂಡಾಗ, ಈ ಗೆಡ್ಡೆಗಳು ಮತ್ತು ಕಾಡಿನ ಇತರೆ ಆಹಾರ ಅವರ ದಿನನಿತ್ಯದ ಆಹಾರದ ಅಗತ್ಯಗಳನ್ನು ಪೂರೈಸುವಲ್ಲಿ ಅತ್ಯಂತ ಮಹತ್ವದ್ದು. ಹೆಚ್ಚುವರಿಯಾಗಿ, ಹಳ್ಳಿಗರು ಅಡಿಗೆಗೆ ಯೋಗ್ಯವಾದ 22 ರೀತಿಯ ವಿವಿಧ ಸೊಪ್ಪುಗಳನ್ನು ಮತ್ತು 12–15

ವಿಧದ ಹಣ್ಣನ್ನು ಕಾಡಿನಿಂದ ಸಂಗ್ರಹಿಸುತ್ತಾರೆ.

ಹಳ್ಳಿಗರು ಸಾಮಾನ್ಯವಾಗಿ ಆಹಾರ ಹುಡುಕಲು ಕಾಡಿಗೆ ಗುಂಪುಗಳಲ್ಲಿ ಹೋಗುತ್ತಾರೆ. ಸಂಗ್ರಹಿಸಿದ ಆಹಾರವನ್ನು ಅವರು ಹಂಚಿಕೊಳ್ಳುತ್ತಾರೆ. ಸಂಗ್ರಹಕ್ಕಾಗಿ ಕಾಡಿಗೆ ಹೋಗದವರಿಗೆ ಒಂದು ಪಾಲು ನೀಡಲಾಗುತ್ತದೆ; ಯಾರನ್ನೂ ಬಿಡುವುದಿಲ್ಲ. ಪ್ರತಿ ಹಳ್ಳಿ ಸಾಂಪ್ರದಾಯಿಕವಾಗಿ ಗಡಿಯನ್ನು ಒಪ್ಪಿಕೊಂಡಿದ್ದು, ಪರಸ್ಪರ ಕಾಡಿನ ಪ್ರವೇಶಾಧಿಕಾರದ ಪ್ರಮಾಣವನ್ನು ನಿಗದಿಗೊಳಿಸಿಕೊಂಡಿದ್ದಾರೆ. ಹಳ್ಳಿಯ ಪ್ರತಿಯೊಬ್ಬ ಸದಸ್ಯನಿಗೂ, ಕಾಡು, ಸ್ಥಳೀಯ ತೊರೆಗಳು, ಮರಗಳ ಮೇಲೆ ಸಮಾನ ಅಧಿಕಾರ ಇದ್ದು, ಆ ಪರಿಸರದ ಸಂಪನ್ಮೂಲಗಳನ್ನು ಹಂಚಿಕೊಳ್ಳುತ್ತಾರೆ. ಒಂದು ಹಳ್ಳಿಯ ಜನ ಬಿದಿರು ಚಿಗುರನ್ನು ಸಂಗ್ರಹಿಸಲು ಇನ್ನೊಂದು ಹಳ್ಳಿಗೆ ಹೋದರೆ, ಆ ಕಡೆಯವರು ಇಲ್ಲಿಗೆ ಜೇನು ಸಂಗ್ರಹಿಸಲು ಬರಬಹುದು. ಈ ಬಗೆಯ ಪರಸ್ಪರ ಅವಲಂಬನೆ ಸಂಸ್ಕೃತಿ ಜನರನ್ನು ಮತ್ತು ಪರಿಸರವನ್ನು ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

## ಸಂಕುಚಿತಗೊಳ್ಳುತ್ತಿರುವ ಅರಣ್ಯ ಸಂಪನ್ಮೂಲಗಳು

ಕ್ಷೇತ್ರಾನುಭವ ಮತ್ತು ಸಮುದಾಯದೊಂದಿಗಿನ ಚರ್ಚೆಗಳು, ಕಾಡನ್ನು ಬಯಲುಗೊಳಿಸಿ, ಅಲ್ಲಿ ತೇಗ, ನೀಲಗಿರಿ, ಹೊಂಗೆಯಂತಹ ಏಕಸಂಸ್ಕೃತಿ ಮರಗಳನ್ನು ಬೆಳೆಸಲಾಗುತ್ತಿದೆ. ಇದರ ಪರಿಣಾಮ ಕಾಡಿನ ಸಂಸ್ಕೃತಿ ತ್ವರಿತವಾಗಿ ಬದಲಾಗುತ್ತಿದೆ. ಕಾಡಿನ ವೈವಿಧ್ಯತೆಯ ಸಂಕುಚಿತವಾಗುತ್ತಿರುವ ನಕಾರಾತ್ಮಕ ಸನ್ನಿವೇಶ, ವನ್ಯಪ್ರಾಣಿಗಳೂ ಸೇರಿದಂತೆ ಮರಮುಟ್ಟು ಹೊರತಾದ ಕಾಡಿನ ಉತ್ಪನ್ನ (ಎನ್‌ಎಫ್‌ಟಿಬಿ) ಸಂಗ್ರಹಿಸುವ ಮಹಿಳೆಯರ ಅನುಭವಕ್ಕೆ ಬರತೊಡಗಿದೆ. 'ಕಾಡುಗಳು ಬದಲಾಗಿವೆ; ಹಾಗೆಯೇ ಜನ ಕೂಡ. ಈ ಪ್ರಕ್ರಿಯೆಯಲ್ಲಿ ಅನೇಕ ಖಾದ್ಯ ಗೆಡ್ಡೆಗಳನ್ನು ಕಾಡು ಕಳೆದುಕೊಂಡಿದೆ. ನಾವು ನಮ್ಮದೇ ಆಹಾರ ವೃಕ್ಷ ನೆಡಲು ಆದ್ಯತೆ ನೀಡುತ್ತೇವೆ' ಎಂದು ಎಂಬತ್ತು ವರ್ಷದ ವೃದ್ಧೆ ಫುಲೋ ಸಿಕೋಕಾ ಹೇಳುತ್ತಾರೆ.

ಆಹಾರ ಮತ್ತು ಸಾಗುವಳಿ ಮುಖ್ಯವಾಹಿನಿ, ವೈವಿಧ್ಯತೆಯ ಬಹು ಮೌಲ್ಯಗಳು, ದೇಶದ ಆದಿವಾಸಿಗಳು ಮತ್ತು ಇತರ ಅರಣ್ಯ ವಾಸಿಗಳು ಸಾಂಪ್ರದಾಯಿಕವಾಗಿ ಬಳಸ್ಪಡುತ್ತಿದ್ದ ಅರಣ್ಯ ಆಧಾರಿತ ಆಹಾರಗಳನ್ನು ಪರಿಗಣಿಸುವುದಿಲ್ಲ. 'ಆಹಾರ ಭದ್ರತೆ'ಯ ಅಧಿಕೃತ ಚಿಂತನೆ, ಕೇಂದ್ರೀಕೃತ ಉಗ್ರಾಣದಿಂದ ರೇಷನ್ ಕಾರ್ಡ್‌ಗಳಿಗೆ ನಿಶ್ಚಿತ ಪ್ರಮಾಣದ ಅಕ್ಕಿ/ಗೋಧಿಯನ್ನು ಪೂರೈಸುವುದು ಅಥವಾ ಸರ್ಕಾರ ವ್ಯಾಖ್ಯಾನಿಸಿದ ಊಟವನ್ನು ನೀಡುವುದಾಗಿದೆ. ಸಿರಿಧಾನ್ಯಗಳು, ಇತರ ಕಾಳುಗಳು, ಬೇಳೆಗಳು, ಎಣ್ಣೆ ಬೀಜಗಳು ಮತ್ತು ಸೊಪ್ಪು ಇತ್ಯಾದಿ ನಿರ್ದಿಷ್ಟ ಪ್ರದೇಶದ ಸ್ಥಳೀಯ– ಆದ್ಯತಾ ಮತ್ತು ಪೌಷ್ಠಿಕ ಬೆಳೆಗಳನ್ನು ನಿರ್ಲಕ್ಷಿಸಲಾಗಿದೆ. ಸೂಕ್ತ ಕಾನೂನು ಮತ್ತು ನೀತಿಯ ಬೆಂಬಲ ಇಲ್ಲ. ಸಾಂಪ್ರದಾಯಿಕ ಅರಣ್ಯವಾಸಿ ಸಮುದಾಯಗಳು, ಸಾಂಪ್ರದಾಯಿಕವಾಗಿ ವಾಸಿಸುತ್ತ ಬಂದಿರುವ ಭೂಮಿಗೆ ಮಾಲೀಕತ್ವ ಪಡೆದಿಲ್ಲದಿರುವುದು, ಅವರ ಜೀವನ ಮತ್ತು ಜೀವನೋಪಾಯದ ಮೇಲೆ ಪರಿಣಾಮ ಬೀರಿದೆ. ಅರಣ್ಯ ಹಕ್ಕು ಕಾಯ್ದೆ ಜಾರಿಯಾದ ಹತ್ತು ವರ್ಷಗಳ ನಂತರವೂ ಒರಿಸ್ಸಾದ ಅರಣ್ಯಗ್ರಾಮಗಳ ಕೇವಲ ಶೇ. 6ರಷ್ಟು ಗ್ರಾಮಗಳವರು ಮಾತ್ರ ಕಾಡಿನ ಮೇಲೆ ತಮ್ಮ ಬಳಕೆಯ ಮತ್ತು ಕಾನೂನಿನ ಹಕ್ಕು ಪಡೆದಿದ್ದಾರೆ.

## ಮುಂದಿನ ದಾರಿ

ಹವಾಮಾನ ಬದಲಾವಣೆಯ ಸನ್ನಿವೇಶದಲ್ಲಿ, ಅರಣ್ಯ ಆಹಾರಗಳು ಬಹುಮುಖ್ಯ ಸಮುದಾಯ– ಆಧಾರಿತ ಅನುಗೊಳಿಸುವ ತಂತ್ರ. ಜಾಗತೀಕರಣ ಮತ್ತು ಸದಾ ಬದಲಾಗುತ್ತಿರುವ ಪ್ರಪಂಚದಲ್ಲಿ ಅರಣ್ಯಗಳಿಗೆ ಅನೇಕ ಮಾನವ ಸೃಷ್ಟಿಸಿದ ಅಪಾಯಗಳಿವೆ.

ಹವಾಮಾನ ವೈಪರೀತ್ಯದ ಈ ಯುಗದಲ್ಲಿ ಕಾಡುಗಳ ಸರಕೀಕರಣ, ಅವು ಆಹಾರದ ಭಂಡಾರವಾಗಿದ್ದರೂ ಕೇವಲ ಇಂಗಾಲದ ಸಂಗ್ರಹಾಗಾರಗಳಂತೆ ಪರಿಗಣಿಸಲಾಗುತ್ತಿದೆ. ಅವುಗಳ ಪಾರಿಸರಿಕ ಕಾರ್ಯಗಳಾದ ಆಮ್ಲಜನಕ ಬಿಡುಗಡೆ, ಮೋಡಗಳನ್ನು ದ್ರವೀಕರಿಸುವುದು, ಅಂತರ್ಜಲ ಹೆಚ್ಚಳ, ಫಲವತ್ತಾದ ಮೇಲ್ಮಣ್ಣು ಸಂರಕ್ಷಣೆ, ಬರ, ಪ್ರವಾಹಗಳ ಕಾಪುತಡೆಯಾಗಿ ವರ್ತಿಸುವುದು ಇವೂ ಕೂಡ ಸ್ಥಳೀಯ ಸಮುದಾಯಗಳ ಆಹಾರ ಭದ್ರತೆಯ ಸಂಗತಿಗಳೇ. ಅರಣ್ಯಗಳ ಈ ಬಹುಮುಖ ಕಾರ್ಯಕ್ಕೆ ಮನ್ನಣೆ ನೀಡುವ ಅಗತ್ಯವಿದೆ.

ಭಾರತದ ಅರಣ್ಯ ನೀತಿಗಳನ್ನು ಆಹಾರ ಭದ್ರತಾ ಉದ್ದೇಶಗಳ ಜೊತೆ ಮರು ಹೊಂದಾಣಿಕೆ ಮಾಡಬೇಕಾಗಿದೆ. ಸುಸ್ಥಿರ ಅರಣ್ಯ ನಿರ್ವಹಣೆ ಕೇವಲ ಮರಮುಟ್ಟುಗಳ ದೃಷ್ಟಿಕೋನದಿಂದ ಮಾತ್ರವಲ್ಲ, ಬದಲಾಗಿ ಕಾಡುಗಳ ಬಹುಮುಖ ಕಾರ್ಯಗಳ ದೃಷ್ಟಿಕೋನದಿಂದ ಆಗಬೇಕು. ಸಾಮಾನ್ಯ ಬಳಕೆಯ ಜಾಗಕ್ಕೆ ಪ್ರವೇಶಾವಕಾಶ ಮತ್ತು ಅಲ್ಲಿ ವೈವಿಧ್ಯ ಕಾಪಾಡಲು ಸಾಕಷ್ಟು ಗಮನ ಕೊಡಬೇಕು. ಅರಣ್ಯ ಪ್ರದೇಶದ ಮೇಲೆ ಸುಧಾರಿತ ಅಧಿಕಾರ ಮತ್ತು ಅರಣ್ಯ ಸಂಪನ್ಮೂಲಗಳ ಮೇಲಿನ ಹಕ್ಕಿಗೆ ಹೆಚ್ಚು ಅವಕಾಶ, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ನೀಡಿದಲ್ಲಿ, ಅದು ಆಹಾರ ಭದ್ರತೆಗೆ ಸುಸ್ಥಿರ ಸಂಪನ್ಮೂಲ ನಿರ್ವಹಣೆ ಮಾಡಲು ನೆರವು ನೀಡಬಹುದು. ಜನ ಮತ್ತು ಅವರ ಸಂಸ್ಕೃತಿಯನ್ನು ಕಾಡನ್ನು ಅದು ಜನ ಮತ್ತು ಅವರ ಸಂಸ್ಕೃತಿಯನ್ನು ಕಾಪಾಡುತ್ತಿದೆ ಎನ್ನುವ ಅಭಿಪ್ರಾಯದಿಂದ ನೋಡಬೇಕು.

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಸಾಗುವಳಿ ರಹಿತ ಆಹಾರವನ್ನು ದೀರ್ಘಾವಧಿ ಅಣಿಗೊಳಿಸುವ ತಂತ್ರವನ್ನಾಗಿ ಪ್ರೋತ್ಸಾಹಿಸುವ ಅಗತ್ಯವಿದೆ. ಮಣ್ಣು ಮತ್ತು ನೀರನ್ನು ರಾಸಾಯನಿಕ ಗೊಬ್ಬರಗಳಿಂದ ವಿಷಕಾರಿಯನ್ನಾಗಿ ಮಾಡದ ಅಥವಾ ಕೃಷಿ ಪರಿಸರವನ್ನು ಅಪಾಯಕ್ಕೊಡ್ಡದ, ಕೃಷಿ ಅರಣ್ಯಗಾರಿಕೆ ಮತ್ತು ಸುಸ್ಥಿರ ಕೃಷಿಯ ಸ್ಥಳೀಯ ಉಪಕ್ರಮಗಳನ್ನು ಉತ್ತೇಜಿಸಬೇಕಾಗಿದೆ– ಈ ವಿಧಾನ ಅನೇಕ ವೈಜ್ಞಾನಿಕ ಮತ್ತು ರಾಜಕೀಯ ವಲಯದ ಕಾರ್ಯಸೂಚಿಗಳಲ್ಲಿ ಆಹಾರ ಭದ್ರತೆ ಮತ್ತು ಪೌಷ್ಠಿಕತೆ ಮೇಲಿದ್ದು, ಆಹಾರ ಭದ್ರತೆ ಮತ್ತು ಪೌಷ್ಠಿಕಾಂಶ–ಸೂಕ್ಷ್ಮ ಭವಿಷ್ಯಕ್ಕೆ ಕಾಡುಗಳು ಮತ್ತು ಮರಗಳ ಕೊಡುಗೆಯನ್ನು ಅರ್ಥಮಾಡಿಕೊಳ್ಳಬೇಕಾಗಿರುವುದು ನಿರ್ಣಾಯಕವಾಗಿರುತ್ತದೆ. ಆಹಾರ ಸಾರ್ವಭೌಮತ್ವವನ್ನು ಸಂಘಟಿತ ನೀತಿಯನ್ನಾಗಿ ಬೆಳೆಸದಿದ್ದರೆ, ಸ್ಥಳೀಯ ಅರಣ್ಯಾವಲಂಬಿತ ಸಮುದಾಯಗಳೂ ಒಟ್ಟಾರೆಯಾಗಿ ರಾಜ್ಯದ ಸಾರ್ವಭೌಮತ್ವವನ್ನು ಬಾಧಿಸಬಲ್ಲರು. ಆಹಾರ ಮತ್ತು ಪೌಷ್ಠಿಕಾಂಶ ಒಂದು ಮಹತ್ವದ ಕ್ಷೇತ್ರ, ಅದನ್ನು ಜನರಿಗೆ ವಿತರಿಸಲು ಮಾರುಕಟ್ಟೆಗೆ ಬಿಡಬೇಕು. ಅರಣ್ಯಗಳೂ ಕೂಡ ವಿಕೇಂದ್ರೀಕೃತವಾಗಿ ಮಾಡುವುದು ಇದನ್ನೇ. ಸಾಗುವಳಿ ರಹಿತ ಆಹಾರಗಳು ಕೇವಲ ಹಸಿವನ್ನು ಹೋಗಲಾಡಿಸುವುದು ಮಾತ್ರವಲ್ಲ, ಅರಣ್ಯ ಸಂರಕ್ಷಿಸುತ್ತದೆ ಮತ್ತು ಅದರ ಜೊತೆ ಜನರ ಸಂಬಂಧವನ್ನು ಉಳಿಸುತ್ತದೆ.

**ಉಲ್ಲೇಖ**


■ Debjeet Sarangi
LIVING FARMS
Plot No. 1181/2146, Ratnakarbag-2, Tankapani Road, Bhubaneswar-751018, Tel. 0674-2430616, 09938582616(M)
Email ID: livingfarms@gmail.com,
Website: www.vasundharaorissa.org


**ಆಂಗ್ಲ ಮೂಲ**

ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 2, ಜೂನ್ 2016

# ಕೃಷಿ ಪರಿಸರ ವಿಧಾನಗಳ ಹರಡುವಿಕೆ

ಕರ್ನಾಟಕದ ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಕುಂಬಳೂರು ಗ್ರಾಮದ ಯುವ ರೈತ ಶ್ರೀ ಎ.ಎನ್.ಆಂಜನೇಯ. ಹದಿನೈದು ವರ್ಷಗಳ ಹಿಂದೆ ಅವರು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾದಾಗ, ಆರೋಗ್ಯ ಸಮಸ್ಯೆಗಳನ್ನುಂಟುಮಾಡುವ ಕೃಷಿ ರಾಸಾಯನಿಕಗಳಿಂದ ದೂರ ಇರಬೇಕೆಂದು ವೈದ್ಯರು ನೀಡಿದ ಸಲಹೆಯಂತೆ, ಅವರು ಸಾವಯವ ಕೃಷಿ ಪದ್ಧತಿಗೆ ತಮ್ಮನ್ನು ಬದಲಿಸಿಕೊಂಡರು. ಅದಕ್ಕೂ ಮೊದಲು, ತಮ್ಮ ಭತ್ತದ ಬೆಳೆಗೆ ಅವರು ಸಾರ್ವತ್ರಿಕ ರೂಢಿಯಂತೆ ಸಾಕಷ್ಟು ರಾಸಾಯನಿಕ ಮತ್ತು ಕೀಟನಾಶಕಗಳನ್ನು ಬಳಸುತ್ತಿದ್ದರು.

ಆಂಜನೇಯ ಅವರಿಗೆ, ಪಕ್ಕದ ಜಿಲ್ಲೆಯ ಶಿಕಾರಿಪುರದ ರೈತ ಶ್ರೀ ಬಿ.ಎನ್.ನಂದೀಶ್, ದ್ವಿದಳ ಧಾನ್ಯದ ಕೃಷಿ (ಮುಖ್ಯ ಬೆಳೆಗೆ ಮೊದಲು ಹಸಿರು ಗೊಬ್ಬರ ಮಣ್ಣಲ್ಲಿ ಬೆರೆಸುವುದನ್ನು ಅಳವಡಿಸಿಕೊಂಡು) ಮಾಡಲು ಸ್ಫೂರ್ತಿ. ಪ್ರಾಸಂಗಿಕವಾಗಿ, ಲೀಸಾ ಇಂಡಿಯಾ ಈ ಮೊದಲು ಬಿ.ಎನ್.ನಂದೀಶ್ ಬರೆದ, ಬೇಳೆ ಕೃಷಿ ಕುರಿತಾದ ಅವರ ಅನುಭವಗಳ ಲೇಖನವನ್ನು ಪ್ರಕಟಿಸಿತ್ತು. ಎಸ್‌ಕೆಡಿಆರ್‌ಡಿಪಿ, ಸಹಜ, ಇತ್ಯಾದಿ ಸಂಸ್ಥೆಗಳ ಜೊತೆ ಆಂಜನೇಯ ಹೊಂದಿದ್ದ ಸಂಪರ್ಕಗಳು ಬೇಳೆ ಕೃಷಿ ಕುರಿತು ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಯಿತು. ಆಂಜನೇಯ ಅದನ್ನು ಪ್ರಯೋಗಿಸಿ ಉತ್ತಮ ಫಲಿತಾಂಶ ಪಡೆದುಕೊಂಡರು. ಇದರಿಂದ ಸ್ಫೂರ್ತಿಗೊಂಡ ಅನೇಕ ರೈತರು, ಆಂಜನೇಯ ಅವರಿಂದ ತಾಂತ್ರಿಕ ನೆರವು ಪಡೆದು ತಾವೂ ಅಳವಡಿಸಿಕೊಂಡರು.

ರೈತರಲ್ಲಿ ಈ ಬಗೆಗಿನ ಆಸಕ್ತಿಯನ್ನು ಗಮನಿಸಿದ ಕೃಷಿ ಇಲಾಖೆ, 2009ರಲ್ಲಿ, ಸ್ಥಳೀಯ ಸಾವಯವ ಕೃಷಿ ಗುಂಪು ಸರಾನ ಮುದ್ದಣ್ಣ ಸಾವಯವ ಕೃಷಿ ಬಳಗಕ್ಕೆ ಹೆಚ್ಚಿನ ಪ್ರದೇಶದಲ್ಲಿ ವಿಸ್ತರಿಸಿಕೊಳ್ಳಲು ನೆರವು ನೀಡಿತು.

ವಿಶೇಷವಾಗಿ ಭತ್ತದ ತಳಿಗಳಲ್ಲಿ ಪಾರಿಸರಿಕ ಕೃಷಿ ನಡೆಸುತ್ತಿರುವ, ನೋಂದಾಯಿತ ಸಾವಯವ ಕೃಷಿಕರ ಗುಂಪು, ಸರಾನ ಮುದ್ದಣ್ಣ ಸಾವಯವ ಕೃಷಿ ಬಳಗ. ಬಳಗ ರಾಸಾಯನಿಕ ರಹಿತ ಕೃಷಿಗೆ ಉತ್ತೇಜನ ನೀಡುತ್ತದೆ ಮತ್ತು ಸಂಘಟಿತ ಮಾರ್ಕೆಟಿಂಗ್ ಮಾಡುತ್ತದೆ. ಕುಂಬಳೂರು ಗ್ರಾಮದ 300 ರೈತರನ್ನು ಬಳಗ ಹೊಂದಿದ್ದು, ಇದೀಗ ಭತ್ತದ ಸಂಸ್ಕರಣೆ ಮತ್ತು ಮಾರ್ಕೆಟಿಂಗನ್ನೂ ಒಳಗೊಂಡಿದೆ.

2009ರಲ್ಲಿ, ಕೃಷಿ ಇಲಾಖೆಯ ನೆರವಿನೊಂದಿಗೆ ಬೇಳೆ ಕೃಷಿಯನ್ನು ಭಾರಿ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಲಾಯಿತು. ಪುಂಡಿ, ನಸುಗುನ್ನಿ, ಢೈಂಚ, ಪಿಲ್‌ಪೆಸರು – ಇವುಗಳನ್ನು ಗುಂಪಿನ ಸದಸ್ಯರು ಹಸಿರು ಗೊಬ್ಬರಕ್ಕಾಗಿ ಬಳಸಿಕೊಂಡರು. ಆಂಜನೇಯ ಅವರು ಕೂಡ, ತಮ್ಮ ಲವಣಮಿಶ್ರಿತವಾಗಿದ್ದ ನಾಲ್ಕು ಎಕರೆ ಭತ್ತದ ಗದ್ದೆಯನ್ನು ದ್ವಿದಳ ಧಾನ್ಯಗಳ ಕೃಷಿಗೆ ವಿಸ್ತರಿಸಿಕೊಂಡರು.

ದ್ವಿದಳ ಧಾನ್ಯದ ಕೃಷಿ ಪ್ರದೇಶ ವರ್ಷದಿಂದ ವರ್ಷಕ್ಕೆ ಹೆಚ್ಚಾಯಿತು. ಇದು 2010ರಲ್ಲಿ 40 ಇದ್ದಿದ್ದು, 2011ರಲ್ಲಿ 150 ಎಕರೆ; 2012ರಲ್ಲಿ 400 ಎಕರೆ; 2013ರಲ್ಲಿ 600 ಎಕರೆ; 2014ರಲ್ಲಿ 1,200 ಎಕರೆಯಷ್ಟಾಯಿತು. ಆ ಪ್ರದೇಶದ ರೈತರು ಈ ವಿಧಾನವನ್ನು ಒಪ್ಪಿಕೊಂಡರು. ಅಷ್ಟೂ ಕೆಲಸವನ್ನು ಸರಾನ ಮುದ್ದಣ್ಣ ಸಾವಯವ ಕೃಷಿಕರ ಬಳಗ ಅನುಷ್ಠಾನಗೊಳಿಸಿ, ಮೇಲ್ವಿಚಾರಣೆ ನಡೆಸಿತು. ಈಗ, ಹಳ್ಳಿಯಲ್ಲಿ ಭತ್ತದ ಬೆಳೆಗಾರರು, ಮುಂದಿನ ವರ್ಷಗಳಲ್ಲಿ 12,000 ಎಕರೆಗಳಿಗೆ ಬೇಡಿಕೆಯಿಟ್ಟಿದ್ದಾರೆ.



ಚಿತ್ರ: ಲೇಖಕರು

ತನ್ನ ಹೊಲದಲ್ಲಿ ಆಂಜನೇಯ

ಈ ವಿಧಾನ ಉತ್ಪಾದನಾ ವೆಚ್ಚವನ್ನು ಶೇ.20ರಷ್ಟು ತಗ್ಗಿಸಲು ಸಹಾಯ ಮಾಡಿತು, ಮತ್ತು ಮಣ್ಣಿನಲ್ಲಿ ಇಂಗಾಲದ ಪ್ರಮಾಣವನ್ನು ಹೆಚ್ಚಿಸಿ, ಭೂಮಿಯನ್ನು ಹೆಚ್ಚು ಫಲವತ್ತಾಗಿಸಿತು. ಕೀಟಬಾಧೆ ಮತ್ತು ರೋಗಗಳ ಪ್ರಕರಣಗಳೂ ಕಡಿಮೆಯಾಗಿರುವುದನ್ನು ರೈತರು ಗಮನಿಸಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನು ಭಾರಿ ಪ್ರಮಾಣದಲ್ಲಿ ಉಪಯೋಗಿಸುವುದನ್ನು ನಿಲ್ಲಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ, 'ಕಳೆದ ಐದು ವರ್ಷಗಳಲ್ಲಿ ಆರೋಗ್ಯ ತುಂಬಾ ಸುಧಾರಿಸಿದೆ' ಎಂದು ಆಂಜನೇಯ ಮತ್ತು ಅವರ ತಂಡ ಹೇಳುತ್ತದೆ.

ತಮ್ಮೆಲ್ಲ ಪರಿಶ್ರಮಕ್ಕಾಗಿ, ಆಂಜನೇಯ ಅವರು, ರಾಜ್ಯ ಸರ್ಕಾರದಿಂದ 'ಕೃಷಿ ಪಂಡಿತ' ಪ್ರಶಸ್ತಿ ಹಾಗೂ ಅನೇಕ ನಾಗರಿಕ ಸಂಸ್ಥೆಗಳಿಂದ ವಿವಿಧ ಪ್ರಶಸ್ತಿಗಳನ್ನು ಸ್ವೀಕರಿಸಿದ್ದಾರೆ.

■ **Manjunath Holalu**
Organic farming consultant
C/o Razaki building, Vinayaka nagar
Savanur Road, Shiggaon- 581 205
Haveri, Karnataka.
E-mail: manjubaduku@gmail.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 3, ಸೆಪ್ಟೆಂಬರ್ 2016

■ **ಟಿ.ಎಂ.ರಾಧ**

# ಏಕವ್ಯಕ್ತಿ ಅಭಿಯಾನ!

## ಕೃಷಿ ಪರಿಸರಶಾಸ್ತ್ರ ಕುರಿತು ಜಾಗೃತಿ ಮಾಡುತ್ತಿರುವ ರೈತ ಶಿಕ್ಷಕ



ಚಿತ್ರ: ಲೇಖಕರು

ಪ್ರದೀಪ್ ಮತ್ತು ಪಾನಿ ಪಂಚಾಯತ್ ಸದಸ್ಯರು ನೀರಿಗೆ ಸಂಬಂಧಿಸಿದ ತಮ್ಮ ಸಮಸ್ಯೆಗಳನ್ನು ಒಟ್ಟಿಗೆ ಸೇರಿ ಪರಿಹರಿಸುತ್ತಾರೆ.

**ಕ್ಷೇತ್ರದಲ್ಲಿ ಕೃಷಿ ಪರಿಸರಶಾಸ್ತ್ರದ ಕುರಿತು ನಿರಂತರವಾಗಿ ಜ್ಞಾನ ಅರಳುತ್ತಿದೆ– ಮತ್ತು, ಜ್ಞಾನದ ಸಹನಿರ್ಮಾಣ ಮತ್ತು ಪ್ರಸಾರದಲ್ಲಿ ರೈತರು ಬಹುಮುಖ್ಯ ಪಾತ್ರ ವಹಿಸುತ್ತಾರೆ. ಕೃಷಿ ಪರಿಸರಶಾಸ್ತ್ರದ ಕುರಿತು ಗಾಢಾನುರಕ್ತಿ ಹೊಂದಿರುವ ಇಲ್ಲೊಬ್ಬ ಶಿಕ್ಷಕ ಹಾಗೂ ರೈತ, ರೈತರ ಜಾಲಗಳಂತಹ ಸ್ಥಳೀಯ ರೈತವೇದಿಕೆಗಳ ಮೂಲಕ ಆ ಕುರಿತು ರೈತರಲ್ಲಿ ಪ್ರೇರಣೆ ನೀಡುತ್ತಿದ್ದಾರೆ.**

ಒರಿಸ್ಸಾದ ಗಂಜಾಂ ಜಿಲ್ಲೆಯ ದಿಗಪಹಾಂಡಿ ಬ್ಲಾಕ್‌ನ ಸಣ್ಣ ಗ್ರಾಮ ಗುಹಾಲ್‌ಪುರ್‌ನ ಮಾಧ್ಯಮಿಕ ಶಾಲೆಯಲ್ಲಿ ಕಳೆದ 16 ವರ್ಷಗಳಿಂದ ಪ್ರದೀಪ್ ಕುಮಾರ್ ಮುಖ್ಯೋಪಾಧ್ಯಾಯರು. ಪ್ರದೀಪ್, ಭೀಮಾಪುರದ ಒಂದು ಕೃಷಿ ಕುಟುಂಬಕ್ಕೆ ಸೇರಿದವರಾಗಿದ್ದು, ಗ್ರಾಮವಿಕಾಸ್ ಎನ್ನುವ ಸ್ವಯಂಸೇವಾ ಸಂಘಟನೆಯಲ್ಲಿ ಅಭಿವೃದ್ಧಿ ವೃತ್ತಿ ಪ್ರಾರಂಭಿಸಿದರು. ಅಭಿವೃದ್ಧಿಯೆಡೆಗೆ ಗಾಢವಾದ ಬದ್ಧತೆ ಹೊಂದಿರುವ ಪ್ರದೀಪ್, ರೈತರು ಮತ್ತು ವಿದ್ಯಾರ್ಥಿಗಳ ಮನಸ್ಥಿತಿ ಬದಲಿಸುವಲ್ಲಿ ಮತ್ತು ಅದನ್ನು ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

### ಕೃಷಿ ಪರಿಸರಶಾಸ್ತ್ರ ವಿಧಾನ– ಎಸ್‌ಆರ್‌ಐ ಪ್ರಸಾರದಲ್ಲಿ

ಗ್ರಾಮವಿಕಾಸದೊಂದಿಗೆ ಸಹಯೋಗದ ಸಂದರ್ಭದಲ್ಲಿ, ಭತ್ತದ ಕೃಷಿಕರ ಜೊತೆ ಕೆಲಸ ಮಾಡಿದ್ದ ಪ್ರದೀಪ್ ಕುಮಾರ್‌ಗೆ, ಭತ್ತದ ಬೆಳೆಯ ಸಾಗುವಳಿಯ ತಾಪತ್ರಯಗಳ ಕುರಿತು, ಅದರಲ್ಲೂ ಮುಖ್ಯವಾಗಿ ನೀರಾವರಿ ನೀರು ಲವಣಮಿಶ್ರಿತಗೊಂಡಿರುವುದರ ಬಗ್ಗೆ ಅರಿವಿತ್ತು. ಲೀಸಾ ಇಂಡಿಯಾದ 2000ನೇ ಇಸವಿ ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಡಾ। ನಾರ್ಮನ್ ಅಪ್ಹಾಪ್ ಅವರ ಲೇಖನ ಓದಿದರು. ಅವರ ಚಿಂತನೆಗಳಿಂದ ಪ್ರಭಾವಿತರಾಗಿ, ಗುಹಾಲ್‌ಪುರ್‌ನ ರೈತಮಿತ್ರರೊಂದಿಗೆ ಅದನ್ನು ಹಂಚಿಕೊಂಡು, ಎಸ್‌ಆರ್‌ಐಯನ್ನು ಪ್ರಯೋಗಿಸುವಂತೆ ಸೂಚಿಸಿದರು. ಇಬ್ಬರು ರೈತರು ಪ್ರಯೋಗಗಳನ್ನು ಮಾಡಿ, ಉತ್ತಮ ಫಲಿತಾಂಶ ಪಡೆದರು.

2000–01ರಲ್ಲಿ ಘೊಡೋಹಾಡ ಅಣೆಕಟ್ಟೆಯಿಂದ ಭತ್ತದ ಕೃಷಿಗೆ ಸೂಕ್ತ ನೀರು ಒದಗಿಸಲು, ಪಾನಿ ಪಂಚಾಯತ್ ಎನ್ನುವ ಜಲಗುಂಪುಗಳನ್ನು ಸಂಘಟಿಸಿಕೊಳ್ಳುವಂತೆ ರೈತರಿಗೆ ಪ್ರೇರಣೆ ನೀಡಿದರು. ಪ್ರತಿಯೊಂದು ಹಳ್ಳಿಯಿಂದ ಇಬ್ಬರು ಪ್ರತಿನಿಧಿಗಳಾಗಿ, ದಿಗಪಹಾಂಡಿ ಬ್ಲಾಕ್‌ನ 57 ಹಳ್ಳಿಗಳ ರೈತರು ಇದರಲ್ಲಿ ಭಾಗಿಯಾದರು. ಈ ಗುಂಪು ಪ್ರತಿ ಎರಡು ತಿಂಗಳಿಗೊಮ್ಮೆ ಭೇಟಿ ಮಾಡಿ, ಕೃಷಿ ಸಂಬಂಧಿ ಸಮಸ್ಯೆಗಳನ್ನು ಚರ್ಚಿಸಿದ್ದಲ್ಲದೆ, ಸರ್ವಾಂಗೀಣ ಗ್ರಾಮಾಭಿವೃದ್ಧಿಯ ಕುರಿತೂ ಮಾತುಕತೆ ನಡೆಸಿದರು. ಈ ಗುಂಪುಸಭೆಗಳಲ್ಲಿ ಅನೇಕ ಗ್ರಾಮ ಮಟ್ಟದ ವಿವಾದಗಳನ್ನು ಇತ್ಯರ್ಥಪಡಿಸಿಕೊಂಡರು. ರೈತರೂ ಆಗಿರುವ ಪ್ರದೀಪ್, ಈ ಗುಂಪಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು ಶಿಕ್ಷಿತ ವ್ಯಕ್ತಿ ಮತ್ತು ಶಿಕ್ಷಕರಾಗಿದ್ದರಿಂದ ಸ್ಥಳೀಯ ಸಮುದಾಯಕ್ಕೆ ಅವರ ಮೇಲೆ ಅಪಾರ ಗೌರವ ಇದೆ.

ಒಂದು ಸಭೆಯಲ್ಲಿ ಪ್ರದೀಪ್, ಎಸ್‌ಆರ್‌ಐ ಬಗ್ಗೆ, ಮತ್ತು ಕಡಿಮೆ ಸಂಪನ್ಮೂಲ ಬಳಸಿ ಹೆಚ್ಚು ಉತ್ಪಾದಿಸುವ ಬಗ್ಗೆ ತಮ್ಮ ಅನುಭವ ಹಂಚಿಕೊಂಡರು. ಮುಖ್ಯವಾಗಿ, ನೀರು ಬಳಕೆದಾರರ ಗುಂಪುಗಳಾಗಿ ನೀರನ್ನು ಸಮರ್ಥವಾಗಿ ಬಳಸುವುದು ಉದ್ದೇಶವಾಗಿದ್ದು, ಎಸ್‌ಆರ್‌ಐನಲ್ಲಿ ಕಡಿಮೆ ನೀರು ಬಳಸಬಹುದು ಎಂದು ಒತ್ತು ನೀಡಿ, ರೈತರನ್ನು ಎಸ್‌ಆರ್‌ಐ ಕಡೆಗೆ ಪ್ರೇರೇಪಿಸಿದರು. ಪ್ರಾರಂಭದಲ್ಲಿ 200 ರೈತರು ಎಸ್‌ಆರ್‌ಐ ಅಳವಡಿಸಿಕೊಂಡರು. 2003ರ ಹೊತ್ತಿಗೆ, ಆ ತಾಲೂಕಿನಲ್ಲಿ ಒಂದು ಸಾವಿರ ರೈತರು ತಮ್ಮ ತೋಟಗಳಲ್ಲಿ ಎಸ್‌ಆರ್‌ಐ ಅಳವಡಿಸಿಕೊಂಡರು.

2005ರವರೆಗೆ, ಎಸ್‌ಆರ್‌ಐಯನ್ನು ಉತ್ತೇಜಿಸುವುದು ಸರ್ಕಾರದ ಇಲಾಖೆಯ ಕಾರ್ಯಸೂಚಿಯಲ್ಲಿರಲಿಲ್ಲ. ಎಸ್‌ಆರ್‌ಐ ಉತ್ತೇಜನಕ್ಕೆ ಸರ್ಕಾರದಿಂದ ಯಾವುದೇ ನೆರವು ಸಿಗುತ್ತಿರಲಿಲ್ಲ ಮತ್ತು ಜಿಲ್ಲೆಯಲ್ಲಿನ ಸ್ವಯಂಸೇವಾ ಸಂಘಟನೆಗಳಾದ ಗ್ರಾಮ್ ವಿಕಾಸ್ ಮತ್ತು ಲಿಪಿಕಾಗಳು ರೈತರಿಗೆ ಈ ಬಗ್ಗೆ ತಿಳುವಳಿಕೆ ನೀಡಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು. ಕಟಕ್‌ನ ಭತ್ತ ಸಂಶೋಧನಾ ಸಂಸ್ಥೆಯಿಂದ ಸಂಪನ್ಮೂಲ ವ್ಯಕ್ತಿಗಳನ್ನ ಆಹ್ವಾನಿಸಿದ ಪ್ರದೀಪ್, ಶಾಲೆಯಲ್ಲಿಯೇ ಕೆಲವು ಸಭೆಗಳನ್ನು ನಡೆಸಿದರು. ಅಲ್ಲಿ 50 ರೈತರು ಪಾಲ್ಗೊಂಡಿದ್ದರು. ಆದಾಗ್ಯೂ ಇದು ಹೆಚ್ಚು ದಿನ ಮುಂದುವರಿಯಲಿಲ್ಲ.

2005ರ ನಂತರ, ಈ ಉಪಕ್ರಮಗಳನ್ನು ಹೆಚ್ಚಿಸುವುದರ ಮೇಲೆ ಅವರು ಗಮನ ಕೇಂದ್ರೀಕರಿಸಿದರು. ಪಾನಿಪಂಚಾಯತ್‌ನ ಮಾಸಿಕ ಮತ್ತು ದ್ವೈಮಾಸಿಕ ತಾಲೂಕು ಮಟ್ಟದ ಸಭೆಗಳಲ್ಲಿ ಫಾಲೋ–ಅಪ್ ಮಾಡಲಾಯಿತು. ಯಶಸ್ಸು ಸಾಧಿಸಲಾಯಿತು, ಎಲ್ಲ ಸಮಸ್ಯೆಗಳನ್ನು ಸಭೆಗಳಲ್ಲಿ ಚರ್ಚಿಸತೊಡಗಿದರು. ಉನ್ನತೀಕರಿಸಬೇಕಾದ ಜ್ಞಾನ ಮತ್ತು ಕೌಶಲ್ಯಗಳನ್ನು ಗುರುತಿಸಲಾಯಿತು. ಆದರೆ ದುರದೃಷ್ಟವೆಂದರೆ ಈ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವರ ಬಳಿ ಸಾಧನಗಳಿರಲಿಲ್ಲ. ಕೃಷಿ ಇಲಾಖೆಯ ಸಿಬ್ಬಂದಿ, ಸದಸ್ಯರು ಒತ್ತಡ ಹಾಕಿದಾಗ ಮಾತ್ರ ಬಂದು, ಹೆಚ್ಚೆಂದರೆ ಉತ್ತಮ ವಿಧಾನಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತಿದ್ದರು.

ಪ್ರಸ್ತುತ, ಎಸ್‌ಆರ್‌ಐಯನ್ನು ಕೃಷಿ ಇಲಾಖೆ ಉತ್ತೇಜಿಸುತ್ತಿದ್ದು, ರಾಜ್ಯ ಮಟ್ಟದ ಉಪಕ್ರಮವಾಗಿದೆ. ರಾಜ್ಯ ಸರ್ಕಾರ ಇದನ್ನು ಉತ್ತೇಜಿಸುವ ಮೊದಲು, ದಿಗಪಹಾಂಡಿಯಲ್ಲಿ ಇದನ್ನು ಅಳವಡಿಸಿಕೊಳ್ಳುವಂತೆ ಪ್ರೇರಣೆ ನೀಡುವಲ್ಲಿ ಪ್ರದೀಪ್ ಮುಖ್ಯ ಪಾತ್ರ ವಹಿಸಿದ್ದರು. 'ಸರ್ಕಾರ ನಡೆಸುತ್ತಿರುವ ಎಸ್‌ಆರ್‌ಐ ತರಬೇತಿ ಶಿಬಿರಗಳು ಸಾಕಷ್ಟು ಪ್ರಮಾಣದಲ್ಲಿಲ್ಲ' ಎಂದು ಪ್ರದೀಪ್ ಅಭಿಪ್ರಾಯಪಡುತ್ತಾರೆ. ರೈತರ ಮನವರಿಕೆಯ ಗತಿ ನಿಧಾನವಾಗಿದ್ದರಿಂದ ಕಾರ್ಯಕ್ರಮವೂ ನಿಧಾನವಾಗಿಯೇ ಆರಂಭವಾಯಿತು. ಅನೇಕ ಪ್ರದರ್ಶನ ಪ್ರವಾಸಗಳ ನಂತರ ರೈತರು ಎಸ್‌ಆರ್‌ಐ ಅಳವಡಿಸಿಕೊಳ್ಳಲು ಆರಂಭಿಸಿದ್ದಾರೆ. 20 ಹಳ್ಳಿಗಳಲ್ಲಿ ಪ್ರದೀಪ್, ಅಲ್ಲಿನ ರೈತರೊಂದಿಗೆ ಸಂವಾದ ನಡೆಸಿದ್ದಾರೆ. ಫಸಲು ಹೆಚ್ಚಾಗಿರುವುದಾಗಿ ರೈತರು ಹೇಳಿಕೊಂಡಿದ್ದಾರೆ. ಎಕರೆಗೆ 15–16 ಕ್ವಿಂಟಲ್ ಪಡೆಯುತ್ತಿದ್ದ ಕೆಲವು ರೈತರು 20–25 ಕ್ವಿಂಟಲ್ ಪಡೆಯುತ್ತಿದ್ದಾರೆ. ಈ ಪದ್ಧತಿ ಅನ್ವೇಷಕಾರಿ ಮತ್ತು ಸಂಪನ್ಮೂಲಗಳನ್ನು ಉಳಿಸುತ್ತದೆ ಎಂದು ರೈತರು ಕಂಡುಕೊಂಡಿದ್ದಾರೆ, ಆದರೆ ದೊಡ್ಡ ಪ್ರಮಾಣದಲ್ಲಿ ಇದನ್ನು ಅವರು ಮಾಡಲು ಸಾಧ್ಯವಿದೆಯೇ ಎನ್ನುವುದರ ಬಗ್ಗೆ ಅವರಲ್ಲಿ ಖಚಿತತೆ ಇಲ್ಲ.

**ಯುವಕರಲ್ಲಿ ಕೃಷಿಪರಿಸರಶಾಸ್ತ್ರ ಮನೋಭಾವ ರೂಪಿಸುತ್ತ**

ಶಾಲೆಯಲ್ಲಿ ಒಂದು ಕೈತೋಟ ಮಾಡುವಲ್ಲಿ ಪ್ರದೀಪ್ ಮುಖ್ಯಪಾತ್ರ ವಹಿಸಿದ್ದರು. ಚಟುವಟಿಕೆ ಆಧಾರಿತ ಪರಿಸರದ ಕುರಿತು ಕಲಿಯುವ ಭಾಗವಾಗಿ ಈ ಕೈತೋಟವನ್ನು ಆರಂಭಿಸಲಾಯಿತು. ಬಹುತೇಕ ವಿದ್ಯಾರ್ಥಿಗಳು ಬಡ ಕೃಷಿಕ ಮನೆತನಗಳಿಂದ ಬಂದವರಾಗಿದ್ದರಿಂದ, ಮಕ್ಕಳಿಗೆ ಸಹಜವಾಗಿಯೇ ಕೈತೋಟದ ಬಗ್ಗೆ ಆಸಕ್ತಿ ಇತ್ತು. ಈ ಕೈತೋಟ 200 ಚ.ಮೀ ಪ್ರದೇಶದಲ್ಲಿದೆ. ಬದನೆಕಾಯಿ, ನುಗ್ಗೇಕಾಯಿ, ಸೊಪ್ಪು, ಪಪಾಯ, ಇತ್ಯಾದಿಗಳನ್ನು ಇಲ್ಲಿ ಬೆಳೆಸಲಾಯಿತು.

ಪರಿಸರ ಸ್ನೇಹಿ ಕೃಷಿಯ ಬಗ್ಗೆ ಅರಿವು ಹೊಂದಿರುವ ಪ್ರದೀಪ್, ಈ ತರಕಾರಿಗಳನ್ನು ಬೆಳೆಸಲು ಸಾವಯವ ಪದ್ಧತಿಗಳನ್ನು ಅಳವಡಿಸಿಕೊಂಡರು. ತೋಟದಲ್ಲಿನ ಕಸವನ್ನು ಬಳಸಿ ಕಾಂಪೋಸ್ಟ್ ತಯಾರಿಸಲು ಒಂದು ಗುಣಿಯನ್ನು ತೋಡಲಾಗಿದೆ. ಹಸುವಿನ ಸಗಣಿ, ಬೇವಿನ ಎಲೆ, ದೇವದಾರು ಎಲೆಗಳು, ಇತ್ಯಾದಿಗಳನ್ನು ಕಾಂಪೋಸ್ಟ್ ತಯಾರಿಸಲು ಬಳಸಲಾಗುತ್ತದೆ. ಒಂದು ಪತ್ರಿಕೆಯಲ್ಲಿ ಎರೆಹುಳು ಗೊಬ್ಬರದ ಬಗ್ಗೆ ಓದಿದ ನಂತರ ಅದರ ಪ್ರಯೋಗವನ್ನೂ ಮಾಡಲಾಯಿತು, ಆದರೆ ಹೆಚ್ಚಿನ ಯಶಸ್ಸು ದೊರೆಯಲಿಲ್ಲ.

ಪ್ರಾರಂಭದಲ್ಲಿ, ಗಿಡಗಳು ಬಿಳಿ ಇರುವೆ ಮತ್ತು ಆಗಾಗ ರೋಗಗಳಿಂದಾಗಿ ತೊಂದರೆಗೀಡಾದವು. ಡಾ.ನಾರಾಯಣರೆಡ್ಡಿ ಅವರ ಅಂಕಣ (ಲೀಸಾ ಇಂಡಿಯಾ ಮ್ಯಾಗಜಿನ್‌ನಲ್ಲಿ ಸಾವಯವ ಕೃಷಿಕರಿಂದ ಪ್ರಕಟವಾಗುವ ಅಂಕಣ) ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯ ಮಾಡಿತು' ಎಂದು ಪ್ರದೀಪ್ ಹೇಳುತ್ತಾರೆ. ಹಸಿರು ಗೊಬ್ಬರವನ್ನು ಅವಲಂಭಿಸಲಾಯಿತು ಮತ್ತು ನಿರಂತರ ಆರೈಕೆ ಮತ್ತು ಗಮನಿಸುವಿಕೆ ಈ ಸಮಸ್ಯೆಗಳಿಂದ ಹೊರಬರಲು ಸಹಾಯ ಮಾಡಿತು. ನಾರಾಯಣರೆಡ್ಡಿಯವರ ಲೇಖನವನ್ನು ಆಧರಿಸಿ, ಚೆಂಡು ಹೂವಿನ ಗಿಡಗಳಿಗೆ ಮಾನವನ ಮಲಮೂತ್ರಗಳನ್ನು ಕೂಡ ಹಾಕಲಾಯಿತು.

ಪ್ರತಿ ಶನಿವಾರದಂದು ಮಕ್ಕಳಿಗೆ ಒಂದು ಗಂಟೆಯಲ್ಲಿ ವಿಶೇಷ ಅನಿಸಿಕೆ ಹಂಚಿಕೊಳ್ಳುತ್ತಿದ್ದರು. ಮಕ್ಕಳ ಅರಿವಿಗೆ ಬಂದ ಪಾರಿಸರಿಕ ಸಮಸ್ಯೆಗಳ ಬಗ್ಗೆ, ಮಕ್ಕಳನ್ನು ಕ್ಲಬ್ ಸಂಘಟಿಸಿ ತಿಳಿಸಿದರು. ತಾವೇನು ಮಾಡುತ್ತಿದ್ದೇವೆ ಎನ್ನುವುದಷ್ಟೇ ಅಲ್ಲದೆ, ಕೈತೋಟ ನಿರ್ವಹಿಸಲಿಕ್ಕೆ ಇರುವ ಸಮಸ್ಯೆಗಳ ಬಗ್ಗೆಯೂ ಮಕ್ಕಳು ಅನಿಸಿಕೆ ಹಂಚಿಕೊಳ್ಳುತ್ತಾರೆ.

**ಮಕ್ಕಳು ಮೊದಲ ಪೀಳಿಗೆಯ ಸಾಕ್ಷರರು. ಕೈತೋಟದ ಬಗ್ಗೆ ಪ್ರಾಯೋಗಿಕ ತರಬೇತಿ ಕೇವಲ ಖುಷಿಯಷ್ಟೇ ಅಲ್ಲ, ಪರಿಸರ ಸ್ನೇಹಿ ಚಟುವಟಿಕೆಗಳ ಬಗ್ಗೆ ಅವರನ್ನು ಜಾಗೃತರನ್ನಾಗಿ, ಅದರ ಮೇಲೆ ನಂಬುಗೆ ಇಡುವಂತೆ ಮಾಡುತ್ತದೆ.**




ಶಾಲಾ ಮಕ್ಕಳು ಪರಿಸರ ಸ್ನೇಹಿ ವಿಧಾನಗಳನ್ನು ಬಳಸಿ ಅಡುಗೆ ತೋಟವನ್ನು ನಿರ್ವಹಿಸುತ್ತಾರೆ. ಚಿತ್ರ: ಲೇಖಕರು

ಮುಂದಿನ ಫಾಲೋಅಪ್ ಕೆಲಸಗಳ ಬಗ್ಗೆ ಶಿಕ್ಷಕರು ಮಾರ್ಗದರ್ಶನ ಮಾಡುತ್ತಾರೆ. ಕೈತೋಟಕ್ಕಾಗಿ ಮಕ್ಕಳಿಗೆ ಯಾವುದೇ ವಿಶೇಷ ತರಬೇತಿ ನೀಡಿಲ್ಲ.

ಕೈತೋಟದ ಫಸಲನ್ನು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ತಯಾರು ಮಾಡಲು ಬಳಸಲಾಗುತ್ತದೆ. ಹೊರಗಡೆಯಿಂದ ಖರೀದಿಸುವ ತರಕಾರಿಗಿಂತ ಅವರು ಬೆಳೆಯುವ ತರಕಾರಿ ಹೆಚ್ಚು ರುಚಿಕರ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ. ಮಕ್ಕಳು ಮನೆಗೆ ಹೋದ ನಂತರ ಈ ಬಗ್ಗೆ ಪೋಷಕರೊಂದಿಗೆ ಚರ್ಚೆ ಮಾಡುತ್ತಾರೆ.

'ಮಾಡಿ ನೋಡುವುದೇ ನಂಬಿಸುತ್ತದೆ' ಎಂದು ಪ್ರದೀಪ್ ಭಾವಿಸಿದ್ದಾರೆ ; ಈ ಮಕ್ಕಳು ಮೊದಲ ಪೀಳಿಗೆಯ ಸಾಕ್ಷರರು, ಕೈತೋಟದ ಬಗ್ಗೆ ಪ್ರಾಯೋಗಿಕ ತರಬೇತಿ ಕೇವಲ ಖುಷಿಯಷ್ಟೇ ಅಲ್ಲ, ಪರಿಸರ ಸ್ನೇಹಿ ಚಟುವಟಿಕೆಗಳ ಬಗ್ಗೆ ಅವರನ್ನು ಜಾಗೃತರನ್ನಾಗಿಸಿ, ಅದರ ಮೇಲೆ ನಂಬುಗೆ ಇಡುವಂತೆ ಮಾಡುತ್ತದೆ. ಖುಷಿಯಿಂದ ಕಲಿಯುವ ಪ್ರಕ್ರಿಯೆ, ಮಕ್ಕಳು ವಿದ್ಯಾಭ್ಯಾಸ ಮುಂದುವರಿಸುವ ವಿಶ್ವಾಸ ಮೂಡಿಸುತ್ತದೆ. 'ಇನ್ನುಮುಂದೆ ಮಕ್ಕಳು ಶಾಲೆ ಬಿಡುವುದಿಲ್ಲ' ಎಂದು ಪ್ರದೀಪ್ ಸಂತಸ ವ್ಯಕ್ತಪಡಿಸುತ್ತಾರೆ.

## ಪ್ರಭಾವ ವಲಯ

ಪಾನಿ ಪಂಚಾಯತ್, ಶಾಲಾ ಮಕ್ಕಳು ಮತ್ತು ಅವರ ಪೋಷಕರ (ಅವರೂ ಕೃಷಿಕರೇ) ಮೂಲಕ ಕೃಷಿ ಸಮುದಾಯಗಳ ಜೊತೆ ಸಂವಾದ ನಡೆಸುವಲ್ಲಿ ಸಕ್ರಿಯವಾಗಿರುವ ಪ್ರದೀಪ್, ಗ್ರಾಮ ಮಟ್ಟದ ಕಾರ್ಯಕರ್ತರು ಮತ್ತು ಬ್ಲಾಕ್ ಮಟ್ಟದ ಅಧಿಕಾರಿಗಳೊಂದಿಗೂ ಸಂಪರ್ಕವಿರಿಸಿಕೊಂಡಿದ್ದಾರೆ. ಪ್ರಸ್ತುತ, ಬ್ಲಾಕ್ ಮಟ್ಟದ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಪ್ರದೀಪ್ ಸಂಪರ್ಕ ವ್ಯಕ್ತಿ. ಅವರು ಅನೇಕ ವಿಷಯಗಳನ್ನು ಅದರಲ್ಲೂ ವಿಶೇಷವಾಗಿ ಪರಿಸರದ ಕುರಿತು ಜಾಗೃತಿ ಮೂಡಿಸುವ ವಿಷಯಗಳ ಕುರಿತಾಗಿ ಚರ್ಚಿಸುತ್ತಾರೆ.

ಅವರ ದೃಷ್ಟಿಕೋನಗಳೊಂದಿಗೆ, ಸಮಾಜದಲ್ಲಿ ಹಲವು ಜನರ ಮೇಲೆ ಪ್ರಭಾವ ಬೀರಲು ವಿದ್ಯಾರ್ಥಿಗಳಿಂದ ಆರಂಭಿಸಿ, ಶಾಲೆಯಲ್ಲಿ ಪ್ರಸ್ತುತ ಕೆಲಸ ಮಾಡುತ್ತಿರುವ ನಿವೃತ್ತರಾಗಿರುವವರ ಮೇಲೂ ಕೂಡ ಪ್ರದೀಪ್ ಸಮರ್ಥರಾಗಿದ್ದಾರೆ. ಉದಾಹರಣೆಗೆ, ಬೆಹ್ರಾಂಪುರ್ ಗ್ರಾಮಪಂಚಾಯಿತಿಯ ಸಮ ಸಿಂಗಿ ಗ್ರಾಮದ ಶ್ರೀ ಕಾಳಿ ಮಿಶ್ರಾ, ಅವರು ಇದೇ ಶಾಲೆಯ ಶಿಕ್ಷಕರಾಗಿದ್ದು, ಅವರೂರಿನಲ್ಲಿ ಈ ಚಿಂತನೆಗಳನ್ನು ಬಿತ್ತುತ್ತಾರೆ. ಸ್ವಯಂಸೇವಾ ಸಂಘಟನೆಯಲ್ಲಿನ ಅವರ ಹತ್ತಿರದ ಸ್ನೇಹಿತರು, ಉದಾಹರಣೆಗೆ ಬೆರ್ಹಾಂಪುರದ ಲಿಪಿಕಾ ಮತ್ತು ದಿಗಪಹಾಂಡಿ ಬ್ಲಾಕ್‌ನ ಜನಜಾಗರಣ್ ಈ ಚಿಂತನೆಗಳನ್ನು ಪಸರಿಸುತ್ತಿದ್ದಾರೆ. ವಾಸ್ತವಿಕವಾಗಿ, ಜನಜಾಗರಣ್ ವತಿಯಿಂದ ವಿಶೇಷ ಚೇತನರು ನಡೆಸುತ್ತಿರುವ ಕನ್ಸಮರಿ ತೋಟದಲ್ಲಿ ಇವರು ಸಂಪನ್ಮೂಲ ವ್ಯಕ್ತಿ. ಆ ಬ್ಲಾಕ್‌ನ 57 ಗ್ರಾಮಗಳವರು ಸದಸ್ಯತ್ವ ಹೊಂದಿರುವ ಪಾನಿ ಪಂಚಾಯತ್ ಸದಸ್ಯರ ಮೇಲೆ ಇವರ ಗಾಢ ಪ್ರಭಾವವನ್ನು ಕಾಣಬಹುದು. ಜೊತೆಗೆ ಅವರು ಬ್ಲಾಕ್ ಮಟ್ಟದ ವಿದ್ಯಾರ್ಥಿಗಳ ಎಕೋ– ಕ್ಲಬ್‌ಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಶಾಲೆಯಲ್ಲಿ ಶಿಕ್ಷಕರಾಗಿದ್ದು, ಪಾನಿ ಪಂಚಾಯತ್‌ನಲ್ಲಿ ಸಕ್ರಿಯ ಸದಸ್ಯರಾಗಿರುವ ಪ್ರದೀಪ್ ಅವರಿಗೆ, ಹೆಚ್ಚು ಜನರ ಜೊತೆ ಸಂವಾದಕ್ಕೆ ಅವಕಾಶ ದೊರೆತಿರುವುದರಿಂದ, ಅವರ ಪ್ರಭಾವ ವಲಯ ಹೆಚ್ಚು ವಿಸ್ತಾರವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಅವರ ವೈಯಕ್ತಿಕ ಗುಣಗಳಾದ ಗಾಢಾನುರಕ್ತಿ ಮತ್ತು ಸಮರ್ಪಣೆ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರದೀಪ್ ಅವರ ಶಿಕ್ಷಾರ್ಹತೆಗಳಿಂದ ಹಳ್ಳಿಯಲ್ಲಿ ಗೌರವಾನ್ವಿತರಾಗಿದ್ದು, ಮುಖ್ಯ ವ್ಯಕ್ತಿಯಾಗಿದ್ದಾರೆ. ಅಭಿವೃದ್ಧಿ ಕಾರ್ಯಗಳೆಡೆಗಿನ ಅವರ ಒಲವು, ಅವರು ಮೊದಲು ನಿರ್ವಹಿಸಿದ ಸಂಸ್ಥೆಗಳಲ್ಲಿನ ಅನುಭವ, ಅವರ ಜಾಲಶಕ್ತಿ ಮತ್ತು ಹೊರಪ್ರಪಂಚದೊಂದಿಗಿನ ಸಂಪರ್ಕಗಳು ಅವರನ್ನು ಗೌರವಾನ್ವಿತ ವ್ಯಕ್ತಿಯಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟಿವೆ. ಮತ್ತೊಂದೆಡೆ, ಅವರಿರುವ ಮುಖ್ಯಶಿಕ್ಷಕ ಸ್ಥಾನ ಯುವಪೀಳಿಗೆಯನ್ನು ತಯಾರು ಮಾಡಲು ಅವಕಾಶ ಒದಗಿಸಿದೆ. ಇವೆಲ್ಲ ಸಂಗತಿಗಳು ಕೃಷಿಪರಿಸರಶಾಸ್ತ್ರದ ಬಗ್ಗೆ ಮಾಹಿತಿಯನ್ನು ಹರಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ವ್ಯಕ್ತಿಯೊಬ್ಬ ವಿಶೇಷ ಒಲವನ್ನು ಹೊಂದಿದಲ್ಲಿ, ವೈಯಕ್ತಿಕವಾಗಿ ಸಮಾಜದಲ್ಲಿ ಸುಧಾರಣೆ ತರಬಲ್ಲ ಎಂದು ಪ್ರದೀಪ್ ಅವರ ಪ್ರಕರಣ ತೋರಿಸುತ್ತದೆ. ಮಾಹಿತಿ ಹಂಚಿಕೆಯ ಶಕ್ತಿ ಇದರಲ್ಲಿ ವಿಶೇಷವಾಗಿ ಹೊರಹೊಮ್ಮಿದೆ. ಒಲವುಳ್ಳ ಸೂಕ್ತ ವ್ಯಕ್ತಿಗೆ ಮಾಹಿತಿ ತಲುಪಿದಲ್ಲಿ, ಅದು ಉಂಟು ಮಾಡುವ ಪರಿಣಾಮಕ್ಕೆ ಮಿತಿ ಇಲ್ಲ. ಒಬ್ಬ ವ್ಯಕ್ತಿ, ಒಬ್ಬ ರೈತ, ಒಬ್ಬ ಶಿಕ್ಷಕ ಕೂಡ ಆತ ವಾಸಿಸುವ ಸಮಾಜದಲ್ಲಿ ಬದಲಾವಣೆ ತರಬಲ್ಲ.

■ **T M Radha**
AME Foundation
Bangalore, India
www.amefound.org
E-mail: leisaindia@yahoo.co.in

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 4, ಡಿಸೆಂಬರ್ 2016

# ಕ್ಷೀರ ಆರ್ಥಿಕತೆ ಮತ್ತು ಅದರ ಪರಿಸರ ಪದ್ಧತಿ ಪುನಶ್ಚೇತನಗೊಳಿಸಲು ನೆರವು

**ಸ್ಥಳೀಯ ಎಮ್ಮೆ ತಳಿ ಮತ್ತು ಪರಿಸರ ಪದ್ಧತಿಗಳನ್ನು ಸಂರಕ್ಷಿಸಲು, ಕೆಲವು ಸಂಘಟನೆಗಳು ಒಟ್ಟಾಗಿ ಗೋಪಾಲಕರ ನೆರವಿಗೆ ಬಂದಿವೆ. ಅವರ ಪಾಲುದಾರಿಕೆ, ಲಾಭದಾಯಕ ಡೈರಿ ಮಾರುಕಟ್ಟೆಗೆ ಪ್ರವೇಶ ಪಡೆಯುವಲ್ಲಿ ಸಮುದಾಯಗಳಿಗೆ ಸಹಾಯ ಮಾಡಿದೆ. ಈಗ, ಅವರು ಆಡಳಿತದ ಹಕ್ಕನ್ನು ಪಡೆಯಲು ಕೂಡ ಸಮುದಾಯಗಳ ಜೊತೆಯಲ್ಲಿದ್ದಾರೆ. ಮುಖ್ಯ ಭಾಗೀದಾರ ಎನ್ನಿಸಿಕೊಂಡಿರುವ ಸರ್ಕಾರ, ಅವರ ಮಾತುಗಳನ್ನು ಕೇಳಿಸಿಕೊಳ್ಳಬೇಕಾಗಿದೆ.**

■ **ರಮೇಶ್ ಭಟ್ಟಿ ಮತ್ತು ಶೌರ್ಯಮೊಯ್ ದಾಸ್**

ಬನ್ನಿ, ಮಾಲ್ಧಾರಿಗಳಿಗೆ 5 ಶತಮಾನಗಳಿಂದ ತವರು (ಕಛ್‌ನಲ್ಲಿ ಗೋಪಾಲಕರ ಸಮುದಾಯ ಆ ಹೆಸರನ್ನು ಹೊಂದಿದೆ). ಒಂದು ಕಾಲದಲ್ಲಿ ಏಷಿಯಾದ ಎರಡನೇ ಅತಿ ದೊಡ್ಡ ಹುಲ್ಲುಗಾವಲು ಪ್ರದೇಶವಾಗಿದ್ದ ಬನ್ನಿ, ಭಾರತದ ಸಮೃದ್ಧ ಹುಲ್ಲುಗಾವಲು ಎಂದು ಹೆಸರಾಗಿತ್ತು. ಅದು 2500 ಚ.ಕಿ.ನಷ್ಟು ವಿಸ್ತಾರವಾಗಿದ್ದು, ಅನೇಕ ವಿಧಗಳ ಮರಗಿಡ, ಪ್ರಾಣಿಪಕ್ಷಿಗಳಿಗೆ ಆಶ್ರಯತಾಣವಾಗಿದೆ. ಇಂದು 7000ಕ್ಕೂ ಹೆಚ್ಚು ಕುಟುಂಬಗಳು ಅಲ್ಲಿ ವಾಸಮಾಡುತ್ತಿದ್ದು, ಅವರಲ್ಲಿ ಬಹುತೇಕರು ಮಾಲ್ಧಾರಿಗಳು. ರಾಜರ ಕಾಲದಲ್ಲಿ ಬನ್ನಿಯಲ್ಲಿ ದನಮೇಯಿಸುವ ಹಕ್ಕನ್ನು ಹೊಂದಿದ್ದರು; ಈ ಹಕ್ಕನ್ನು ದನಗಾಹಿ ತೆರಿಗೆ ವಿಧಿಸಿ ನೀಡಲಾಗಿತ್ತು. ಹುಲ್ಲುಗಾವಲಿನ ಬಳಕೆ ಮತ್ತು ನಿರ್ವಹಣೆಯ ನಿರ್ಧಾರವನ್ನು ಮಾಲ್ಧಾರಿ ಸಮುದಾಯದ ಮುಖಂಡರು ಮಾಡುತ್ತಿದ್ದರು, ಮತ್ತು ಸಮುದಾಯ ಒಟ್ಟಾಗಿ ಎಲ್ಲರೂ ನಿಯಮಗಳನ್ನು ಪಾಲಿಸುವಂತೆ ಮಾಡುತ್ತಿತ್ತು. ಈ ಮಾಲ್ಧಾರಿಗಳು 1856ರಲ್ಲಿ ರಾಜರ ಆಳ್ವಿಕೆಯಲ್ಲಿ ತಮಗೆ ನೀಡಿದ್ದ ಹಕ್ಕಿನ ದಾಖಲೆಗಳನ್ನು ಈಗಲೂ ಹೊಂದಿದ್ದಾರೆ.

1995ರಲ್ಲಿ ಬನ್ನಿಯನ್ನು ಸಂರಕ್ಷಿತ ಅರಣ್ಯ ಎಂದು ವರ್ಗೀಕರಿಸಲಾಯಿತು. ಸಮೀಕ್ಷೆ ಅಥವಾ ಮರುವಸತಿ ಕಲ್ಪಿಸುವ ಪ್ರಕ್ರಿಯೆಗಳು ಆಗ ನಡೆಯಲಿಲ್ಲ. ಆಗಿನಿಂದಲೂ, ಹುಲ್ಲುಗಾವಲಿನ ಆಡಳಿತ ನಿರ್ವಹಣೆ ಅಸ್ಪಷ್ಟವಾಗಿದೆ, ಕಂದಾಯ ಇಲಾಖೆ 1998ರಲ್ಲಿ ಇದರ ಆಡಳಿತ ನಿಯಂತ್ರಣವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿತಾದರೂ, ಅರಣ್ಯ ಇಲಾಖೆ, ಬನ್ನಿಗೆ ಸೇರಿದ ಹಳ್ಳಿಗಳ ಸಮೀಕ್ಷೆ ಮುಗಿಯುವವರೆಗೆ ಆಡಳಿತ ಕೈಗೆತ್ತಿಕೊಳ್ಳಲು ನಿರಾಕರಿಸಿತು. ಆಗಿನಿಂದ ಕಂದಾಯ ಇಲಾಖೆಯಾಗಲಿ, ಅರಣ್ಯ ಇಲಾಖೆಯಾಗಲಿ ಅದನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮುಂದಾಗಲಿಲ್ಲ. ಆದರೆ ಮಾಲ್ಧಾರಿಗಳು ಯಾವುದೇ ವಿಧ್ಯುಕ್ತ ನಿಯಂತ್ರಣ ಹೊಂದದಿದ್ದರೂ, ತಮ್ಮ ಸಾಂಪ್ರದಾಯಿಕ ಪದ್ಧತಿಗಳಿಂದ ಹುಲ್ಲುಗಾವಲನ್ನು ನಿರ್ವಹಿಸಿ, ಆಡಳಿತ ನಡೆಸುತ್ತಿದ್ದಾರೆ. ಸತ್ವಪೂರ್ಣ ಪ್ರಾಣಿ ತಳಿಗಳನ್ನು ಹೊಂದಿರುವುದಕ್ಕೆ ಮಾಲ್ಧಾರಿಗಳು ಪ್ರಖ್ಯಾತವಾಗಿದ್ದು, ವಿಶೇಷವಾಗಿ ಬನ್ನಿ ಎಮ್ಮೆ, ಪರಿಸರ ಪದ್ಧತಿಯೊಂದಿಗೆ ಸಮನ್ವಯ ಸಂಬಂಧ ಹೊಂದಿದೆ ಮತ್ತು ಅದು ಮಾಲ್ಧಾರಿಗಳ ಸೊಗಸಾದ ಸಂಸ್ಕೃತಿಯಾಗಿದೆ.

## ಕ್ರಿಯೆಗೆ ಕರೆ

ಅದೇನೇ ಇರಲಿ, ಪರಿಸ್ಥಿತಿಗಳು ತ್ವರಿತವಾಗಿ ಬದಲಾಗಲಿದ್ದವು. 2008ರಲ್ಲಿ ನಡೆದ ಬನ್ನಿ ಪಶುಮೇಳ, ಬನ್ನಿಯ ತಳಿಗಳು, ಸಂಸ್ಕೃತಿ,



ಚಿತ್ರ: ಲೇಖಕರು

ಸಾಂಪ್ರದಾಯಿಕವಾಗಿ ಹುಲ್ಲುಗಾವಲನ್ನು ಮಾಲ್ಧಾರಿಗಳು ಸುಸ್ಥಿತಿಯಲ್ಲಿಡುತ್ತಾರೆ

ಮಾನವ ಪರಿಸರಗಳ ಸಂಭ್ರಮದ ವಾರ್ಷಿಕ ದನಗಳ ಜಾತ್ರೆ, ಬದಲಾವಣೆಯ ವೇದಿಕೆಯಾಯಿತು. ಮಾಲ್ಧಾರಿ ಹಿರಿಯರು, ಸಮುದಾಯದ ಜೀವನೋಪಾಯ ಹೆಚ್ಚಿಸುವ ಕುರಿತು ಗಮನ ಕೇಂದ್ರೀಕರಿಸುವ ಅಗತ್ಯವನ್ನು ಮನಗಂಡರು. ಬನ್ನಿ ಎಮ್ಮೆ ತಳಿಗೆ ಮಾನ್ಯತೆ, ಹುಲ್ಲುಗಾವಲಿನ ಮೇಲೆ ಸಮುದಾಯದ ಹಕ್ಕು, ಬನ್ನಿ ಹುಲ್ಲುಗಾವಲನ್ನು ಸಂರಕ್ಷಿಸಲು ಅಭಿವೃದ್ಧಿ ಯೋಜನೆಗಳು, (ಒಂದು ಅಸಂಗತ ತಳಿ ಪ್ರೊಸ್ಪೋಸಿಸ್ ಜೂಲಿಫ್ಲೋರಾ ದಾಳಿ ಮಾಡಿ, ಹುಲ್ಲುಗಾವಲು ಹಾಳಾಗುತ್ತಿತ್ತು) ಇತ್ಯಾದಿ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಕೆಲಸ ಮಾಡಲು ಅವರು ನಿರ್ಧರಿಸಿದರು. 2009ರಲ್ಲಿ, 1200 ಮಾಲ್ಧಾರಿಗಳು ಮುಂದೆ ಬಂದು ಬನ್ನಿ ತಳಿ ಅಭಿವೃದ್ಧಿ ಸಂಘವೊಂದನ್ನು, ಬನ್ನಿ ಪಶು ಉಚ್ಛೇರಕ್ ಮಾಲ್ಧಾರೀಸ್ ಸಂಗಠನ್ (ಬಿಪಿಯುಎಂಎಸ್) ಹೆಸರಿನಲ್ಲಿ ಗುಜರಾತ್ ಟ್ರಸ್ಟ್ ಅಂಡ್ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ನೋಂದಾಯಿಸಿದರು, ಮತ್ತು ಸಮುದಾಯದ ಉದ್ದೇಶಗಳನ್ನು ಈಡೇರಿಸಲು ಕೆಲಸ ಮಾಡತೊಡಗಿದರು. ಬಿಪಿಯುಎಂಎಸ್ ತನ್ನ ಆಡಳಿತ ಸ್ವರೂಪವನ್ನು ವಿಧ್ಯುಕ್ತಗೊಳಿಸಿ, 21 ಕಾರ್ಯಕಾರಿ ಸಮಿತಿ ಸದಸ್ಯರನ್ನು ಮೂರು ವರ್ಷಗಳ ಕಾಲಕ್ಕೆ ಆಯ್ಕೆ ಮಾಡಿದರು. ಪ್ರತಿಯೊಂದು ಗ್ರಾಮಪಂಚಾಯತ್‌ನಿಂದ ತಲಾ ಒಬ್ಬೊಬ್ಬರು ಮತ್ತು ಇಬ್ಬರು ಪರಿಶಿಷ್ಟ ಜಾತಿಯವರನ್ನು ಕಾರ್ಯಕಾರಿ ಸಮಿತಿ ಹೊಂದಿತ್ತು. ಸ್ಥಳೀಯ ಸ್ವಯಂಸೇವಾ ಸಂಸ್ಥೆ ಸಹಜೀವನ್ ಜೊತೆಗೂಡಿ, ಎನ್‌ಡಿಡಿಬಿ ಜೊತೆ ಬನ್ನಿ ಎಮ್ಮೆಯನ್ನು ನೋಂದಾಯಿಸಿ, ಕ್ಷೀರ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಿದರು. ಬನ್ನಿ ಸಂರಕ್ಷಣೆಗೆ ಎದುರಾಗಿದ್ದ ಸವಾಲುಗಳನ್ನು ಸಾಂಪ್ರದಾಯಿಕ ಆಡಳಿತ ಮಾದರಿ ಮೂಲಕ ಪರಿಹರಿಸಲು ಮತ್ತು ಅದರ ಮೇಲಿನ ವಿಧ್ಯುಕ್ತ ಹಕ್ಕನ್ನು

ಉಳಿಸಿಕೊಳ್ಳಲು ಸರ್ಕಾರದೊಂದಿಗೆ ಮಾತುಕತೆ ಪ್ರಾರಂಭಿಸಿದರು.

## ಬನ್ನಿ ಎಮ್ಮೆ– ಮಾನ್ಯತೆ ಪಡೆಯುವತ್ತ

ಸಮುದಾಯದ ಜೀವನೋಪಾಯ ಹೆಚ್ಚಿಸಲು ಅದುವರೆಗೆ ಬಿಪಿಯುಎಂಎಸ್ ಅಪೂರ್ಣ ಯಶಸ್ಸು ಸಾಧಿಸಿತ್ತು. ಬನ್ನಿ ಎಮ್ಮೆ ತಳಿಗಳನ್ನು ಬನ್ನಿಯಲ್ಲಿ ಪೀಳಿಗೆಗಳಿಂದ ಅಭಿವೃದ್ಧಿಪಡಿಸಲಾಗುತ್ತಿತ್ತು. ಈ ತಳಿ ವಿಶೇಷವಾದ ಗುಣಗಳನ್ನು ಹೊಂದಿದ್ದು, ಬರಪರಿಸ್ಥಿತಿಯನ್ನು ತಡೆದುಕೊಳ್ಳಬಲ್ಲ, ರೋಗನಿರೋಧಕ ಗುಣ ಹೊಂದಿರುವ, ಸಂಕಷ್ಟದ ಪರಿಸ್ಥಿತಿಯಲ್ಲೂ ಹೆಚ್ಚು ಹಾಲು ನೀಡಬಲ್ಲ, ಶಾಂತ ಸ್ವಭಾವದ, ರಾತ್ರಿ ತಾನೇ ಹುಲ್ಲು ಮೇಯಬಲ್ಲದ್ದಾಗಿದ್ದು, ಉಷ್ಣ ಮತ್ತು ಅರೆಉಷ್ಣ ಹವಾಮಾನ ಸನ್ನಿವೇಶಗಳಿಗೆ ಸೂಕ್ತವಾದುದಾಗಿದೆ. ಸಹಜೀವನ, ಸರ್ದಾರ್ ಕೃಷಿ ನಗರ್ ಯೂನಿವರ್ಸಿಟಿ (ಎಸ್‌ಡಿಎಯು) ಮತ್ತು ರಾಜ್ಯ ಸರ್ಕಾರದ ಪಶುಸಂಗೋಪನಾ ಇಲಾಖೆಗಳ ನೆರವಿನೊಂದಿಗೆ, ಬಿಪಿಯುಎಂಎಸ್ ಈ ತಳಿಯನ್ನು 2010ರಲ್ಲಿ ನೋಂದಾಯಿಸಿತು. ತಳಿ ಮತ್ತು ತಳಿಗಾರರು ಇಬ್ಬರಿಗೂ ಈ ನೋಂದಣಿ ಮನ್ನಣೆ ನೀಡಿತು. ನ್ಯಾಷನಲ್ ಬಯೋಡೈವರ್ಸಿಟಿ ಅಥಾರಿಟಿ ಮತ್ತು ಲೈಫ್ ನೆಟ್ವರ್ಕ್, ಮಾಲ್ಧಾರಿ ಹಾಜಿ ಮೂಸಾ ಮತ್ತು ಬಿಪಿಯುಎಂಎಸ್‌ಗೆ ಜಂಟಿಯಾಗಿ, ತಳಿ ರಕ್ಷಕ ಪ್ರಶಸ್ತಿಯನ್ನು ನೀಡಿತು. ಬಿಪಿಯುಎಂಎಸ್ ಅಧ್ಯಕ್ಷ ಸಲೆಮಾಮಡ್ ಹಲೆಪೋತ್ರಾ ಅವರನ್ನು ಎನ್‌ಬಿಎಜಿಆರ್‌ನ ನಿರ್ವಹಣಾ ಸಮಿತಿ ಸದಸ್ಯರನ್ನಾಗಿ ನೇಮಿಸಲಾಯಿತು. (ಈಗಲೂ ಮುಂದುವರಿದಿದ್ದಾರೆ). ಬನ್ನಿ ಎಮ್ಮೆಗಳಿಗೆ ಬೇಡಿಕೆ ಹೆಚ್ಚಾಯಿತು, ನೋಂದಾವಣೆ ನಂತರ ಅದರ ಸರಾಸರಿ ಬೆಲೆ ಎರಡು ಪಟ್ಟಿಗಿಂತ ಹೆಚ್ಚಾಯಿತು.

ಸ್ವಾತಂತ್ರ್ಯದ ನಂತರ ಭಾರತದಲ್ಲಿ ನೋಂದಾವಣೆಗೊಂಡ ಮೊದಲ ಎಮ್ಮೆ ತಳಿ ಬನ್ನಿ ಎಮ್ಮೆ, ಅದಾದ ನಂತರ 29 ಜಾನುವಾರು ತಳಿಗಳನ್ನು ಎನ್‌ಬಿಎಜಿಆರ್ ನೋಂದಾವಣೆ ಮಾಡಿಕೊಂಡಿದೆ.

## ಕ್ಷೀರ ಆರ್ಥಿಕತೆ ಹೆಚ್ಚಳ

ಬನ್ನಿಯ ಗೋಪಾಲಕರು ಸ್ಥಳೀಯ ಬೇಡಿಕೆಗಿಂತ ಅಪಾರ ಪ್ರಮಾಣದಲ್ಲಿ ಹೆಚ್ಚಾಗಿ ಹಾಲು ಉತ್ಪಾದಿಸುತ್ತಿದ್ದರು. ಆದ್ದರಿಂದ 2008ರವರೆಗೆ ಬೆಲೆ ಕಡಿಮೆ ಇತ್ತು. ಹಾಲಿನ ಡೈರಿಯನ್ನು ಸ್ಥಾಪಿಸಿ, ಕಚ್ ಹೊರಗೆ ಇದನ್ನು ಮಾರ್ಕೆಟಿಂಗ್ ಮಾಡುವುದು ಕಾಲದ ಅವಶ್ಯಕತೆಯಾಗಿದ್ದರಿಂದ ಎನ್‌ಡಿಡಿಬಿ ಜೊತೆ ಬಿಪಿಯುಎಂಎಸ್ ಚರ್ಚೆ ನಡೆಸಿತು. ಎನ್‌ಡಿಡಿಬಿ ಇದಕ್ಕೆ ಒಪ್ಪಿಕೊಂಡು ಬಿಪಿಯುಎಂಎಸ್ ಸಹಯೋಗದೊಂದಿಗೆ ಬನ್ನಿಯ ಹಳ್ಳಿಗಳಲ್ಲಿ ಹಾಲು ಶೀತಲ ಕೇಂದ್ರಗಳನ್ನು ತೆರೆಯಿತು. ಇದರ ಪರಿಣಾಮ ಹಾಲಿನ ಬೆಲೆ ಕಳೆದ ದಶಕದಲ್ಲಿ ಮೂರು ಪಟ್ಟು ಹೆಚ್ಚಳ ಕಂಡಿತು. ಇದರಿಂದ ಹಾಲಿನ ಉತ್ಪಾದನೆಯೂ ಹೆಚ್ಚಾಯಿತು. 2008ರಲ್ಲಿ ದಿನವೊಂದಕ್ಕೆ 60,000 ಲೀಟರ್ ಹಾಲು ಉತ್ಪಾದಿಸುತ್ತಿದ್ದ ಬನ್ನಿ ಗೋಪಾಲಕರು, ಈಗ ಒಂದು ಲಕ್ಷ ಲೀಟರ್‌ಗಳಿಗೂ ಹೆಚ್ಚು ಹಾಲು ಉತ್ಪಾದಿಸುತ್ತಾರೆ. ಇಂದು ಜಾನುವಾರು ಆರ್ಥಿಕತೆ ವಾರ್ಷಿಕ 110 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ.

## ಸಾಂಪ್ರದಾಯಿಕ ಆಡಳಿತ ಪದ್ಧತಿಯ ಪುನರುಜ್ಜೀವನ

ಭಾರತದಲ್ಲಿ ಅರಣ್ಯ ಭೂಮಿ ಬಗ್ಗೆ ತುಂಬಾ ಕಾಲದಿಂದಲೂ ವಿವಾದದಲ್ಲಿದೆ, ಇದು ಇತ್ತೀಚಿನ ದಶಕಗಳಲ್ಲಿ ತೀವ್ರಗೊಂಡಿದೆ. ಸ್ಥಳೀಯ ಜನ ಮತ್ತು ಸಮುದಾಯಗಳ ಉಳಿವಿಗೆ ಅನಿವಾರ್ಯವಾಗಿರುವ ಕಾಡನ್ನು, ಅರಣ್ಯ ಸಂರಕ್ಷಣೆಯ ನೆಪದಲ್ಲಿ ಸರ್ಕಾರ ಏಕಮುಖವಾಗಿ ವಶಕ್ಕೆ ತೆಗೆದುಕೊಳ್ಳುತ್ತಿದೆ. ಹುಲ್ಲುಗಾವಲುಗಳಿಗೆ ಬೇಲಿ ಹಾಕುವುದು, ಸಾಮಾನ್ಯ ನಾಗರಿಕರು ಮತ್ತು ಸ್ಥಳೀಯ ಸಮುದಾಯಗಳನ್ನು ಈ ಸಂಪನ್ಮೂಲಗಳ ಮೇಲಿನ ಹಕ್ಕುಗಳಿಂದ ಇದನ್ನು ಹೊರಗಿಡುವುದು, ಮೊಟಕುಗೊಳಿಸುವುದು ಅಥವಾ ರದ್ದುಪಡಿಸುವುದು ಎನ್ನುವುದಾಗಿ ನೋಡಲಾಗುತ್ತಿದೆ. ಸ್ಥಳೀಯ ಜನ, ಆಗಾಗ್ಗೆ ನಾಗರಿಕ ಸಂಘಟನೆಗಳ ನೆರವಿನಿಂದ ಸಮುದಾಯ ಸಂಪನ್ಮೂಲಗಳನ್ನು ವಶಕ್ಕೆ ತೆಗೆದುಕೊಳ್ಳುವುದನ್ನು ವಿರೋಧಿಸಿವೆ ಮತ್ತು ಗೋಮಾಳ ಮತ್ತು ಸಮುದಾಯ ಸಂಪನ್ಮೂಲಗಳ ಮೇಲೆ ತಮ್ಮ ಹಕ್ಕು ಮತ್ತು ಮಾಲೀಕತ್ವವನ್ನು ಪುನರ್ ಸ್ಥಾಪಿಸಲು ಪ್ರಯತ್ನಪಟ್ಟಿವೆ. ಈ ಪ್ರಯತ್ನಗಳ ಪರಿಣಾಮ ಬುಡಕಟ್ಟು ಜನ ಹಾಗೂ ಇತರೆ ಸಾಂಪ್ರದಾಯಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮನ್ನಣೆ – ಎಫ್‌ಆರ್‌ಎ) ಕಾಯ್ದೆ 2006ನ್ನು ರೂಪಿಸಲು ದಾರಿಮಾಡಿಕೊಟ್ಟಿತು. ಸ್ಥಳೀಯ ಸಮುದಾಯಗಳ ಪಿತ್ರಾರ್ಜಿತ ಭೂಮಿ, ಸಮುದಾಯ ಅರಣ್ಯ ಸಂಪನ್ಮೂಲಗಳು ಮತ್ತು ವಾಡಿಕೆಯ ಗಡಿ ಇವುಗಳನ್ನು ಎಫ್‌ಆರ್‌ಎ ಪರಿಗಣನೆಗೆ ತೆಗೆದುಕೊಳ್ಳುತ್ತದೆ. ದುರದೃಷ್ಟವಶಾತ್, ಎಫ್‌ಆರ್‌ಎ ಅನುಷ್ಠಾನಕ್ಕೆ ಕೆಲವು ಸ್ವಹಿತಾಸಕ್ತ ಗುಂಪು ಮತ್ತು ವ್ಯಕ್ತಿಗಳಿಂದ ಅನೇಕ ಅಡೆತಡೆಗಳುಂಟಾಗಿವೆ. ಇದರ ಪರಿಣಾಮ ಎಫ್‌ಆರ್‌ಎ ಜೀವನೋಪಾಯಗಳನ್ನು ಭದ್ರಗೊಳಿಸುವ, ಅರಣ್ಯ ಸಂರಕ್ಷಣೆಯನ್ನು ಹೆಚ್ಚಿಸುವ, ಸ್ಥಳೀಯ ಆಡಳಿತಕ್ಕೆ ಬಲ ತುಂಬುವ ಮತ್ತು ಅದರ ಅನುಷ್ಠಾನದಿಂದ ರಾಜಕೀಯ ಅವಕಾಶ ಆರಂಭಿಸುವ ತನ್ನ ಆಶಯಗಳನ್ನು ಸಾಧಿಸುವಲ್ಲಿ ಸೀಮಿತ ಯಶಸ್ಸನ್ನು ಕಂಡಿದೆ.

ಗುಜರಾತಿನಲ್ಲಿ (ಕಛ್‌ನಲ್ಲಿ) ಸನ್ನಿವೇಶ ಭಿನ್ನವಾಗೇನಿಲ್ಲ. ಬಿಪಿಯುಎಂಎಸ್ ಸರ್ಕಾರದೊಂದಿಗೆ ಸಮಾಲೋಚಿಸಿ, ತಮ್ಮ ಹಕ್ಕುಗಳನ್ನು ವಿಧ್ಯುಕ್ತಗೊಳಿಸಿಕೊಳ್ಳುವುದು ಪ್ರಯಾಸಕರವಾಗಿದೆ; ಅದಿನ್ನೂ ಗುರಿ ತಲುಪಬೇಕಾಗಿದೆ. ಬಿಪಿಯುಎಂಎಸ್ ಸಮುದಾಯದ ಹಕ್ಕುಗಳನ್ನು ದಾಖಲು ಮಾಡಲು ಪ್ರಾರಂಭಿಸಿತು ಮತ್ತು ನಗೋಯ ಶಿಷ್ಟಾಚಾರದ ವಿಧಿ 8ಜೆ ಅಡಿಯಲ್ಲಿ ಬಿಸಿಪಿ ಅಭಿವೃದ್ಧಿಪಡಿಸಿದ ದಿಕ್ಕಿನಲ್ಲಿದೆ. 2009ರಲ್ಲಿ ಅರಣ್ಯ ಇಲಾಖೆ ವಿಶಾಲ ಬನ್ನಿ ಪ್ರದೇಶಗಳಿಗೆ ಬೇಲಿ ಹಾಕಲು ಕಾರ್ಯ ಯೋಜನೆಯೊಂದಿಗೆ ಮುಂದೆ ಬಂದಿತು. ಸಮುದಾಯಗಳೊಂದಿಗೆ ಸಮಾಲೋಚಿಸದೆ, ತಂದ ಈ ಕಾರ್ಯ ಯೋಜನೆಯ ಪ್ರಸ್ತಾವ, ಬನ್ನಿಯೊಳಗಿನ ಅನೇಕ ನೀರಾವರಿ ಭೂಮಿಗಳಿಗೆ ಪ್ರವೇಶಾಧಿಕಾರವನ್ನು ನಿರಾಕರಿಸಿದ್ದಲ್ಲದೆ, ಒಂದು ವರ್ಷದಲ್ಲಿ ಗೋಪಾಲಕರು ಸುತ್ತಮುತ್ತಲ ಪ್ರದೇಶಗಳಿಗೆ ಚಲಿಸಬೇಕಾಗುತ್ತದೆ ಎನ್ನುವ ಅಂಶ ಗೊತ್ತಿಲ್ಲವೇನೋ ಎಂಬಂತಿತ್ತು. ತಮ್ಮನ್ನು ಸುಸ್ಥಿರವನ್ನಾಗಿಸಿರುವ ಪರಿಸರಕ್ಕೆ ಈ ಕಾರ್ಯಯೋಜನೆಯ ಅನುಷ್ಠಾನ ಅಪಾಯ ತಂದೊಡ್ಡುವುದು ಸ್ಪಷ್ಟವಾಗಿದ್ದರಿಂದ, ಬನ್ನಿ ತಳಿಗಾರರ ಸಂಘ ತಮ್ಮ ಸಮುದಾಯದ ಹಕ್ಕುಗಳನ್ನು ಕೇಳಲು ಮುಂದಾದರು. ಇದು ಅವರ ಜೀವನೋಪಾಯ, ತಳಿಗಳು ಮತ್ತು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿತು.

ಬನ್ನಿಯ ಗೋಪಾಲಕರು ಹಲವು ಪೀಳಿಗೆಗಳಿಂದ ಬನ್ನಿ ಎಮ್ಮೆ ತಳಿ ಅಭಿವೃದ್ಧಿಯನ್ನು ಮಾಡುತ್ತಾರೆ



ಚಿತ್ರ: ಲೇಖಕರು

ಬನ್ನಿಯ ಹುಲ್ಲುಗಾವಲಿನ ಮೇಲೆ ತಮ್ಮ ಹಕ್ಕನ್ನು ವಿಧ್ಯುಕ್ತವನ್ನಾಗಿ ಮಾಡಲು ಎಫ್‌ಆರ್‌ಎ ಒಂದು ಮುಖ್ಯ ಸಾಧನ ಎಂದು ಅರಿತುಕೊಂಡ ತಳಿಗಾರರ ಸಂಘ, ತಮ್ಮ ಹಕ್ಕುಗಳಿಗೆ ಹೋರಾಟ ನಡೆಯುತ್ತಿರುವುದರಿಂದ, ಸಾಂಪ್ರದಾಯಿಕ ಆಡಳಿತ ಪದ್ಧತಿಯನ್ನು ಪುನಶ್ಚೇತನಗೊಳಿಸಲು ಇದು ಸುಸಂದರ್ಭ ಎಂದು ಭಾವಿಸಿತು. ಬಿಪಿಯುಎಂಎಸ್ ಬನ್ನಿಯ ಎಲ್ಲ 54 ಹಳ್ಳಿಗಳಲ್ಲಿ ಸಹಿಸಂಗ್ರಹ ಚಳವಳಿ ಆರಂಭಿಸಿತು. ಈ ಚಳವಳಿ ಈಗ 'ಬನ್ನಿ ಕೋ ಬನ್ನಿ ರಹನೇ ದೋ' ಚಳವಳಿ ಎಂದು ಪ್ರಖ್ಯಾತವಾಗಿದೆ. ಇದರರ್ಥ 'ಬನ್ನಿಯನ್ನು ಹುಲ್ಲುಗಾವಲನ್ನಾಗಿರಲು ಬಿಡಿ' ಎಂದು ಮತ್ತು ಗೋಪಾಲಕರೇ ಹುಲ್ಲುಗಾವಲನ್ನು ಸಾಂಪ್ರದಾಯಿಕವಾಗಿ ಹುಲ್ಲುಗಾವಲನ್ನು ಬಳಸುವ, ಸಂರಕ್ಷಿಸುವ ಮತ್ತು ನಿರ್ವಹಿಸುವ ನಿಟ್ಟಿನಲ್ಲಿ ಕೆಲಸ ಆರಂಭಿಸಿದರು. ಬಿಪಿಯುಎಂಎಸ್ ಹಳ್ಳಿ ಮತ್ತು ಪಂಚಾಯತ್ತಗಳಲ್ಲಿ ಅನೇಕ ಸಭೆಗಳನ್ನು ನಡೆಸಿ, ಬೇಲಿ ಹಾಕಲು ತಮ್ಮ ಒಪ್ಪಿಗೆ ಇಲ್ಲದಿರುವುದನ್ನು ಸಂಘಟಿತವಾಗಿ ಪ್ರದರ್ಶಿಸಲು, ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು, ಮತ್ತು ಬನ್ನಿಯಲ್ಲಿ ಶೀಘ್ರಾತಿಶೀಘ್ರ ಎಫ್‌ಆರ್‌ಎ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವನ್ನು ಮನವಿ ಮಾಡಿಕೊಳ್ಳಲು ಪ್ರಾರಂಭಿಸಿದರು. ಬುಡಕಟ್ಟು ಜನರ ಕಲ್ಯಾಣ ಸಚಿವ ಹಾಗೂ ಅರಣ್ಯ ಇಲಾಖೆಯೊಂದಿಗೆ ಮಾಲ್ಧಾರಿ ಸಮುದಾಯದ ಹಿರಿಯರು ಮತ್ತು ಬಿಪಿಯುಎಂಎಸ್ ಪ್ರತಿನಿಧಿಗಳು ಸಮಾಲೋಚನೆ ನಡೆಸಿದರು. ರಾಜ್ಯದಲ್ಲಿ ಎಫ್‌ಆರ್‌ಎಯನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದ್ದು, ಕಛ್‌ನಲ್ಲಿ ಇನ್ನೂ ಜಾರಿಯಾಗಬೇಕಾಗಿದೆ ಎಂದು ಪ್ರತಿನಿಧಿಗಳಿಗೆ ಬುಡಕಟ್ಟು ಕಲ್ಯಾಣ ಸಚಿವಾಲಯ ಮಾಹಿತಿ ನೀಡಿ, ಪರಿಶಿಷ್ಟ ರಹಿತ ಪ್ರದೇಶಗಳಲ್ಲಿ (ಕಛ್‌ನಂತಹ ಬುಡಕಟ್ಟು ಜನ ಕಡಿಮೆ ಇರುವ ಪ್ರದೇಶಗಳಲ್ಲಿ) ಎಫ್‌ಆರ್‌ಎಯನ್ನು ಅನುಷ್ಠಾನಗೊಳಿಸಲು ನೋಡಲ್ ಏಜನ್ಸಿಯನ್ನು ಅಂತಿಮಗೊಳಿಸಿಲ್ಲ ಎಂದು ತಿಳಿಸಿತು. 2012ರಲ್ಲಿ ಕಾರ್ಯಯೋಜನೆಯ ಅನುಷ್ಠಾನಕ್ಕೆ ಅರಣ್ಯ ಇಲಾಖೆ ಉಪಕ್ರಮಿಸಿತು. ಮಾಲ್ಧಾರಿಗಳು ಭುಜ್‌ನಲ್ಲಿ ಬೃಹತ್ ಮೇಳ ಸಂಘಟಿಸಿ, ಕಛ್ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ರಾಜ್ಯ ಮಟ್ಟದ ನಿಗಾ ಸಮಿತಿ, ಎಫ್‌ಆರ್‌ಎ ಅಡಿಯಲ್ಲಿ ಎಂದಿನವರೆಗೆ ತಮ್ಮ ಹಕ್ಕುಗಳನ್ನು ಪರಿಗಣಿಸುವುದಿಲ್ಲವೋ ಅಲ್ಲಿಯವರೆಗೆ ಪ್ರತಿಭಟಿಸಲಾಗುವುದು ಎಂದು ತಿಳಿಸಿತು. ಹುಲ್ಲುಗಾವಲು ನಿರ್ವಹಿಸುವ ರೀತಿಯನ್ನು, ಜೂನ್ 5, 2012ರಂದು ಬಿಪಿಯುಎಂಎಸ್ ಸುದ್ದಿಗೋಷ್ಠಿ ಕರೆದು ವಿವರಿಸಿತು ಮತ್ತು ಮಾಧ್ಯಮಗಳಿಂದ ಈ ಹೋರಾಟಕ್ಕೆ ಅಭೂತಪೂರ್ವ ಬೆಂಬಲ ದೊರಕಿತು.

### ಸರ್ಕಾರದೊಂದಿಗೆ ಮಾತುಕತೆ

ಬಿಪಿಯುಎಂಎಸ್ ಮನವಿಯ ಮೇರೆಗೆ, ಪ್ರತಿಯೊಂದು ಹಳ್ಳಿಯಲ್ಲೂ ಗ್ರಾಮಸಭೆಗಳು ಅರಣ್ಯ ಹಕ್ಕು ಸಮಿತಿ (ಎಫ್‌ಆರ್‌ಸಿ)ಗಳನ್ನು ಆರಂಭಿಸಿತು ಮತ್ತು ಬನ್ನಿಯ ಮೇಲೆ ಹಕ್ಕು ಕೇಳಿತು. ಈ ಪ್ರಯತ್ನಗಳಿಂದಾಗಿ, ಗುಜರಾತ್ ಸರ್ಕಾರ ನೋಟಿಫಿಕೇಶನ್ ಹೊರಡಿಸಿ, ಎಲ್ಲ ಪರಿಶಿಷ್ಟ ರಹಿತ ಜಿಲ್ಲೆಗಳಲ್ಲಿ ಎಫ್‌ಆರ್‌ಎ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸೂಚಿಸಿತು. ಆಗ ಜಿಲ್ಲಾಡಳಿತ ಔಪಚಾರಿಕವಾಗಿ ಗ್ರಾಮಸಭೆಗಳನ್ನು ಕರೆದು, ಪ್ರತಿಯೊಂದು ಹಳ್ಳಿಯಲ್ಲೂ ಅರಣ್ಯ ಹಕ್ಕು ಸಮಿತಿ (ಎಫ್‌ಆರ್‌ಸಿ) ರಚಿಸುವಂತೆ ಸೂಚಿಸಿತು. ಸಹಭಾಗಿ ಪ್ರಯೋಗಗಳ ಮೂಲಕ ಸಂಪನ್ಮೂಲ ಗುರುತಿಸುವ ಯೋಜನೆ ಅಭಿವೃದ್ಧಿಪಡಿಸಿ, ಸಾಂಪ್ರದಾಯಿಕ ಹುಲ್ಲು ಮೇಯಿಸುವ ಪದ್ಧತಿ, ಜೈವಿಕ–ಧೈಹಿಕ ಪರಿಸ್ಥಿತಿಗಳು, ಜಾನುವಾರುಗಳ ಅವಲಂಬನೆ ಮತ್ತು ಅಸ್ತಿತ್ವದಲ್ಲಿರುವ ವೃಕ್ಷ ಮತ್ತು ಪ್ರಾಣಿ ಸಂಪತ್ತಿನ ಜೈವಿಕ ವೈವಿಧ್ಯತೆ ಬಗ್ಗೆ ಅಧ್ಯಯನ ನಡೆಸಿತು. ಈ ಸಮುದಾಯಗಳ ಹಕ್ಕು ಕೋರಿಕೆಗಳನ್ನು ಎಸ್‌ಡಿಎಲ್‌ಸಿ ಅನುಮೋದಿಸಿತು ಮತ್ತು ಡಿಎಲ್‌ಸಿ ತಾತ್ವಿಕ ಒಪ್ಪಿಗೆ ನೀಡಿತು. ರಚನೆಗೊಂಡಿದ್ದ 54 ಎಫ್‌ಆರ್‌ಸಿಗಳ ಪೈಕಿ, 48 ಸಮಿತಿಗಳು ಬನ್ನಿಯ ಸಮಾನ ಹಕ್ಕುಗಳನ್ನು ಪ್ರತಿಪಾದಿಸಿದವು. ಬನ್ನಿಯ ಪ್ರದೇಶಗಳಿಗೆ ಪ್ರವೇಶಾಧಿಕಾರ ಬಯಸುವ ಗೋಪಾಲಕರ ಇಂಗಿತವನ್ನು ಇದು ಪ್ರತಿಫಲಿಸಿದ್ದರಿಂದ, ಬಿಪಿಯುಎಂಎಸ್ ಪಾಲಿಗೆ ದಾಖಲಿಸಬಹುದಾದ ಸಾಧನೆ. ಇಡೀ ಅರಣ್ಯದ ಮೇಲೆ ತಮ್ಮ ಹಕ್ಕು ಕೋರಿಕೆ ಸಲ್ಲಿಸಲು ಬೃಹತ್ ಸಮುದಾಯ ಒಟ್ಟಾಗಿ ಬಂದಿದ್ದು ಅದೇ ಮೊದಲು.

ಬಿಪಿಯುಎಂಎಸ್, ಆಗಿನಿಂದಲೂ, ಪ್ರಖ್ಯಾತ ಸಂಶೋಧನಾ ಸಂಸ್ಥೆಗಳಾದ ಎಟಿಆರ್‌ಇಇ, ಎನ್‌ಸಿಬಿಎಸ್ ಮತ್ತು ಅಂಬೇಡ್ಕರ್ ಯೂನಿವರ್ಸಿಟಿಗಳೊಂದಿಗೆ ಜೊತೆಗೂಡಿ, ರಾಂಬಲ್ (ರಿಸರ್ಚ್ ಅಂಡ್ ಮಾನಿಟರಿಂಗ್ ಇನ್ ಬನ್ನಿ ಲ್ಯಾಂಡ್‌ಸ್ಕೇಪ್– ಬನ್ನಿ ಭೂ ಪ್ರದೇಶದಲ್ಲಿ ಸಂಶೋಧನೆ ಮತ್ತು ಮೇಲ್ವಿಚಾರಣೆ) ಎನ್ನುವ ಹುಲ್ಲುಗಾವಲಿನ ಅಧ್ಯಯನ ಮತ್ತು ಅದರ ಸಂರಕ್ಷಣೆ ಮತ್ತು ನಿರ್ವಹಣೆಗೆ ಸಂಶೋಧನೆ– ಬೆಂಬಲಿತ ಒಳಸುರಿಗಳನ್ನು ಒದಗಿಸಲು ಬದ್ಧವಾಗಿರುವ ಸಂಸ್ಥೆಯನ್ನು ಪ್ರಾರಂಭಿಸಿತು.

ಬನ್ನಿ ಮಾಲ್ಧಾರಿಗಳ ಪ್ರಯತ್ನಗಳು ಅವರ ಕೋರಿಕೆಗಳನ್ನು ವಿಧ್ಯುಕ್ತಗೊಳಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದೇ ಅಲ್ಲದೆ, ಗುಜರಾತ್‌ನ ವಿವಿಧ ಜಿಲ್ಲೆಗಳಲ್ಲಿ ಪರಿಶಿಷ್ಟೇತರ ಸಾಮಾನ್ಯ ಪ್ರದೇಶಗಳಲ್ಲಿ ವಾಸ ಮಾಡುವ ಇತರೆ ಸಮುದಾಯಗಳವರಿಗೆ ಅಗತ್ಯ ಎಫ್‌ಆರ್‌ಎ ನೆರವು ದೊರಕಿಸಿಕೊಟ್ಟಿತು. ಬನ್ನಿ ಮೇಲಿನ ಸಮುದಾಯ ಹಕ್ಕುಗಳನ್ನು ವಿಧ್ಯುಕ್ತಗೊಳಿಸುವ ಪ್ರಯತ್ನಗಳು ಇನ್ನೂ ಮುಂದುವರಿದಿದ್ದು, ಈಗ ಭುಜ್‌ನ ಜಿಲ್ಲಾಧಿಕಾರಿ, ಗುಜರಾತ್ ಮುಖ್ಯಮಂತ್ರಿಗಳೊಂದಿಗೆ, ಬಿಪಿಯುಎಂಎಸ್ ಮಾತುಕತೆ ನಡೆಸಿದೆ. ಈ ಪ್ರಯಾಣ ಅನೇಕ ಪ್ರಯೋಗಗಳಿಂದ ಕೂಡಿದ್ದು ಮತ್ತು ಅಪಾರ ಕಷ್ಟಗಳನ್ನು ಎದುರಿಸಲಾಯಿತು. ಮಾಲ್ಧಾರಿಗಳು ಸಂಘಟಿತರಾಗಿ ಇವೆಲ್ಲವನ್ನೂ ಈಗಿನವರೆಗೆ ಎದುರಿಸುತ್ತಿದ್ದಾರೆ. ಭಾರತದಲ್ಲಿ ಬನ್ನಿ ಮಾಲ್ಧಾರಿಗಳು ಹುಲ್ಲುಗಾವಲಿನ ಮೇಲೆ ಹಕ್ಕು ಸ್ಥಾಪಿಸಲು ಕಾರ್ಯಪ್ರವೃತ್ತವಾದ ಏಕೈಕ ಗೋಪಾಲಕರ ಸಮುದಾಯ. ಗಮನಿಸಬೇಕಾದ್ದೆಂದರೆ, ಬನ್ನಿ, ಅದರ ಮೇಲಿನ ಹಕ್ಕುಗಳಿಗಾಗಿ ಸಮುದಾಯ ಮತ್ತು ಸರ್ಕಾರದ ನಡುವೆ ಮಾತುಕತೆ ನಡೆಯುತ್ತಿರುವ ಅತ್ಯಂತ ದೊಡ್ಡ ಹುಲ್ಲುಗಾವಲು. ಭಾರತದಲ್ಲಿ, ನಿರ್ವಹಣೆ ಇಲ್ಲದೆ ಅಥವಾ ಸೂಕ್ತವಾಗಿ ನಿರ್ವಹಿಸದ ಕಾರಣ ಹುಲ್ಲುಗಾವಲು ಕ್ಷೀಣಿಸುತ್ತಿರುವುದನ್ನು ನೋಡುತ್ತಿದ್ದೇವೆ. ಮಾಲ್ಧಾರಿಗಳು ಬಿಪಿಯುಎಂಎಸ್ ಈ ಸಮಸ್ಯೆಯನ್ನು ಪರಿಹರಿಸಲು ಒಂದು ವ್ಯವಸ್ಥೆಯನ್ನು ಮುಂದಿಟ್ಟಿದ್ದು, ಇದನ್ನು ದೇಶಾದ್ಯಂತ ಅನುಸರಿಸಬಹುದಾಗಿದೆ. ಅವರ ಹಕ್ಕುಗಳಿಗೆ ಮನ್ನಣೆ ನೀಡಿರುವುದು ಕೇವಲ ಭಾರತದ ಗೋಪಾಲಕರ ಸಾಧನೆಯಲ್ಲ, ಭಾರತದ ಪ್ರಜಾಪ್ರಭುತ್ವದ್ದೂ ಕೂಡ. ಬನ್ನಿಯ ಮೇಲಿನ ಹಕ್ಕುಗಳ ಮನ್ನಣೆ, ಇತರ ಗೋಪಾಲಕರ ಸಮುದಾಯಗಳಿಗೂ ಸ್ಫೂರ್ತಿ ನೀಡಿ, ಇದೇ ದಾರಿಯಲ್ಲಿ ನಡೆದು, ಹುಲ್ಲುಗಾವಲಿನ ಮೇಲೆ ತಮ್ಮ ಹಕ್ಕುಗಳನ್ನೂ ದಾಖಲಿಸುತ್ತಾರೆ ಎನ್ನುವ ಭರವಸೆಯನ್ನು ನಾವು ಹೊಂದಿದ್ದೇವೆ.


■ **Ramesh Bhatti**
Programme Director, Sahjeevan
Bhuj, Kutch – 370001
www.sahjeevan.org
E-mail: Rkb335@gmail.com



**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 4, ಡಿಸೆಂಬರ್ 2016

# ಸಾವಯವ ಕೃಷಿ ಉತ್ತೇಜನಕ್ಕೆ ಒಟ್ಟಾಗಿ ಬಂದ ಸಂಸ್ಥೆಗಳು

■ ಎಸ್.ವಲ್ಲಾಳ್ ಕಣ್ಣನ್
ಪಿ.ಆನಂದ ಪ್ರಿಯ
ಮತ್ತು ಪಿ.ತಮಿಳ್‌ಸೆಲ್ವಿ

**ಮುಖ್ಯವಾಹಿನಿಯ ಕೃಷಿ ಸಂಸ್ಥೆಗಳು ಸಹಯೋಗದ ಉಪಕ್ರಮದ ಮೂಲಕ ಸಾವಯವ ಕೃಷಿಗೆ ಉತ್ತೇಜನ ನೀಡುತ್ತಿವೆ. ಕರೂರ್‌ನಲ್ಲಿನ ಕೃಷಿ ವಿಜ್ಞಾನ್ ಕೇಂದ್ರ, ಬಹು ಸಂಸ್ಥೆಗಳ ಮೂಲಕ ಅದು ಮಾಡಿದ ಪ್ರಯತ್ನ, ಕರೂರು ಜಿಲ್ಲೆಯ ರೈತರು ಸಾವಯವ ವಿಧಾನದ ಕೃಷಿಯೆಡೆಗೆ ವಾಲಲು ಸಹಾಯವಾಯಿತು. ಅದರಿಂದಾಗಿ, ಅವರಲ್ಲಿ ಆತ್ಮವಿಶ್ವಾಸ ತುಂಬಿದ್ದೇ ಅಲ್ಲದೆ, ಅವರ ಒಟ್ಟು ಆದಾಯ ಮತ್ತು ಕೃಷಿ ಉದ್ಯೋಗವನ್ನು ಹೆಚ್ಚಿಸಿದೆ.**



ಸಾವಯವ ಉತ್ಪನ್ನಗಳು ಮತ್ತು ತಂತ್ರಜ್ಞಾನಗಳ ಪ್ರದರ್ಶನ

ಉತ್ಪಾದನೆ, ಪ್ರಮಾಣಪತ್ರ ಗಳಿಸುವುದು ಮತ್ತು ರಫ್ತು ಕ್ಷೇತ್ರಗಳ ವಿಷಯದಲ್ಲಿ ಭಾರತದಲ್ಲಿ ಸಾವಯವ ಉತ್ಪಾದನೆ ಮತ್ತು ಮಾರುಕಟ್ಟೆಗೆ ಹೆಚ್ಚು ಸಾಧ್ಯತೆ ಇದ್ದಾಗಲೂ ಅನೇಕ ಕಾರಣಗಳಿಂದಾಗಿ ಸಾಧನೆ ಹೇಳಿಕೊಳ್ಳುವಂತಿಲ್ಲ. ನಿರ್ದಿಷ್ಟ ಮಾನದಂಡಗಳೊಂದಿಗೆ ಉತ್ಪಾದನೆ ಮಾಡಲು ತಿಳುವಳಿಕೆಯ ಕೊರತೆ, ಆಸಕ್ತ ರೈತರಿಗೆ ಸಾವಯವ ಪದ್ಧತಿಗಳ ಬಗ್ಗೆ ಮಾಹಿತಿ, ಅಗತ್ಯಗಳು ಮತ್ತು ಮಾರ್ಕೆಟ್ ಲಭ್ಯತೆಯ ಕೊರತೆ, ಸಾವಯವ ಕೃಷಿ ಮತ್ತು ಸಾವಯವ ಉತ್ಪನ್ನಗಳ ಬಗ್ಗೆ ಗ್ರಾಹಕರಲ್ಲಿ ಅರಿವಿನ ಕೊರತೆ, ವಿತರಣೆಯ ಅತಿವೆಚ್ಚ, ರೈತರು ಮತ್ತು ಸಂಶೋಧಕರಲ್ಲಿ, ಸಂಶೋಧನಾ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ ದಾಖಲಿಸುವುದು ಮತ್ತು ಪ್ರಚಾರ ಮಾಡುವುದು, ಸಂಶೋಧನೆಗಳಲ್ಲಿ ಪ್ರಾಯೋಗಿಕ ಮನೋಧರ್ಮದ ಕೊರತೆ ಇತ್ಯಾದಿ.. ಇವುಗಳಲ್ಲಿ ಕೆಲವು.

ಪಿಆರ್‌ಎ ಮತ್ತು ಗುಂಪು ಚರ್ಚೆಯ ಸಂದರ್ಭಗಳಲ್ಲಿ, ಕರೂರಿನ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಜಿಲ್ಲೆಯ ಸಾವಯವ ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳಾದ, ಕಡಿಮೆ ಉತ್ಪಾದನೆ, ತೋಟದ ನಿರುಪಯುಕ್ತ ವಸ್ತುಗಳನ್ನು ಸೂಕ್ತವಾಗಿ ಮರುಬಳಕೆ ಮಾಡದಿರುವುದು, ಉತ್ಪನ್ನಗಳಿಗೆ ಕಡಿಮೆ ಬೆಲೆ ದೊರಕುತ್ತಿರುವುದು, ಸಾವಯವ ಕೃಷಿಯ ಕುರಿತು ಜ್ಞಾನ ಮತ್ತು ಮಾರುಕಟ್ಟೆಗಳ ಕೊರತೆ, ಇತ್ಯಾದಿಗಳನ್ನು ಗುರುತಿಸಿತು. ಸಾವಯವ ಕೃಷಿಯನ್ನು ಉತ್ತೇಜಿಸಲು, ಗುಂಪು ಪ್ರಮಾಣೀಕರಣದ ಮೂಲಕ ಸಣ್ಣ ಹಿಡುವಳಿದಾರರಿಗೆ ಅನುಕೂಲ ಮಾಡಿಕೊಡಲು, ಆ ಪ್ರದೇಶದಲ್ಲಿ ಕೆವಿಕೆ ರೈತರೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿತು.

ಹಳ್ಳಿಗಳನ್ನು, ಹತ್ತಿರತ್ತಿರ ಇರುವ ಮತ್ತು ಸಮಾನ ರೀತಿಯ ತೋಟಗಾರಿಗೆ ಪದ್ಧತಿ ಹೊಂದಿರುವಂತೆ ಗ್ರಾಮಗುತ್ತಿಗಳನ್ನಾಗಿ ಮಾಡಲಾಯಿತು. 63 ಗುಂಪುಗಳನ್ನು 4 ಗುತ್ತಿಗಳನ್ನಾಗಿ ಮಾಡಲಾಯಿತು. ಈ ಗುತ್ತಿಗಳಲ್ಲಿ ಪ್ರಮುಖವಾಗಿ ಬೆಳೆಯುತ್ತಿದ್ದ ಬೆಳೆಗಳೆಂದರೆ, ಭತ್ತ, ಕಬ್ಬು, ಬಾಳೆ, ಶೇಂಗಾ ಮತ್ತು ಸಿರಿಧಾನ್ಯಗಳು ಹಾಗೂ ತೋಟಗಾರಿಕಾ ಬೆಳೆಗಳಾದ ತರಕಾರಿ, ಮರಗೆಣಸು ಮತ್ತು ಬಾಳೆ.

## ಸಾಂಸ್ಥಿಕ ವಿಧಾನ

ಕೆವಿಕೆ ಕರೂರ್ ಜಿಲ್ಲೆಯಲ್ಲಿ ಸಾವಯವ ಕೃಷಿಯನ್ನು ಸಾಂಸ್ಥಿಕ ವಿಧಾನದ ಮೂಲಕ ಉತ್ತೇಜನಗೊಳಿಸುತ್ತಿದೆ. ಮಾಹಿತಿ ಮತ್ತು ಉತ್ಪಾದನೆಗಳಿಗಾಗಿ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು (ಎಸ್ಎಯುಗಳು), ಉತ್ಪಾದನಾ ಅಂಶಗಳ ಕುರಿತ ಮಾಹಿತಿಗಾಗಿ ಸಂಶೋಧನಾ ಕೇಂದ್ರಗಳು ಹಾಗೂ ಆರ್ಥಿಕ ನೆರವಿಗಾಗಿ ರಾಷ್ಟ್ರೀಯ ಸಾವಯವ ಕೃಷಿಯ ಕೇಂದ್ರ (ಎನ್‌ಸಿಓಎಫ್), ದರ್ಜೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ, ಎಪಿಇಡಿಎ (ಅಪೆಡಾ), ಮಾರ್ಕೆಟಿಂಗ್ ಮಾಹಿತಿ ಮತ್ತು ಸಂಗ್ರಹ ಮತ್ತು ತಂತ್ರಜ್ಞಾನ ಪ್ರಚಾರಗಳಿಗಾಗಿ ಮಾರ್ಕೆಟಿಂಗ್ ಸಂಸ್ಥೆಗಳು, ಮತ್ತು ಗುಂಪು ಮಟ್ಟದಲ್ಲಿ ಜನರ ಸಂಸ್ಥೆಗಳ ಜೊತೆ ಅದು ಕೆಲಸ ಮಾಡಿತು. ಪ್ರತಿಯೊಂದು ಸಂಸ್ಥೆಗೂ ನಿರ್ದಿಷ್ಟ ಪಾತ್ರ ಇತ್ತು.

## ಸಾಮರ್ಥ್ಯ ನಿರ್ಮಾಣ

ಜ್ಞಾನ ಮತ್ತು ಕೌಶಲ್ಯವೃದ್ಧಿಗಾಗಿ ಪ್ರಾತ್ಯಕ್ಷಿಕೆ ಮತ್ತು ತರಬೇತಿಗಳನ್ನು ಆಯೋಜಿಸಲಾಯಿತು. ಮಣ್ಣಿನ ಫಲವತ್ತತೆ ನಿರ್ವಹಣೆ, ಸಾವಯವ ಕೃಷಿಯ ನೀತಿ ಮತ್ತು ವಿಧಾನಗಳು, ಸಾವಯವ ಒಳಸುರಿ ಉತ್ಪಾದನೆಯ ತಂತ್ರಜ್ಞಾನಗಳು, ನೈಸರ್ಗಿಕ ಸಂಪನ್ಮೂಲಗಳು ಮತ್ತು ಐಟಿಕೆ ಉಪಯೋಗ, ಸಾವಯವ ಕೃಷಿಯ ದಾಖಲು ಮಾಡುವಿಕೆ ಮತ್ತು ಪ್ರಮಾಣೀಕರಣ, ಫಸಲು ಕೊಯ್ದ ನಂತರದ ತಂತ್ರಗಳು ಮುಂತಾದ ವಿಷಯಗಳಲ್ಲಿ ರೈತರಿಗೆ, ಅವರ ಕ್ಷೇತ್ರದಲ್ಲಿ ಮತ್ತು ಕೆವಿಕೆ ಕ್ಯಾಂಪಸ್‌ಗಳಲ್ಲಿ ತರಬೇತಿ ನೀಡಲಾಯಿತು. 2006–08ರವರೆಗೆ ಕೆವಿಕೆ ಸುಮಾರು 3402 ರೈತರಿಗೆ ತರಬೇತಿ ನೀಡಿತು.

ಜೈವಿಕ ಒಳಸುರಿಗಳ ಬಳಕೆ ಮತ್ತು ಜೈವಿಕ ಅನಿಲಕ್ಕೆ ಬಳಸಿದ ಸಗಣಿಯ ಬಳಕೆ ಕುರಿತು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಯಿತು. ಗಾಜಿಯಾಬಾದಿನ ಎನ್‌ಸಿಓಎಫ್‌ನ ಆರ್ಥಿಕ ನೆರವಿನೊಂದಿಗೆ ಜೈವಿಕ ಒಳಸುರಿಗಳ ಬಳಕೆಯ ಪ್ರಾತ್ಯಕ್ಷಿಕೆ ನಡೆಸಲಾಯಿತು. ವಡಸೇರಿ, ಅರ್ಚಂಪಟ್ಟಿ ಮತ್ತು ಮುದಲೈಪಟ್ಟಿ ಗ್ರಾಮಗಳಲ್ಲಿ ಭತ್ತ, ಬೆಂಡೆ ಮತ್ತು ಬಾಳೆಗಳ ಮೇಲೆ ಜೈವಿಕ ಒಳಸುರಿಗಳ ಕುರಿತು ಮೂರು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಯಿತು. ಇದು ಸಾವಯವ ಉತ್ಪಾದನೆ ಮತ್ತು ತಂತ್ರಜ್ಞಾನಗಳ ಕುರಿತು ರೈತರಲ್ಲಿ ವಿಶ್ವಾಸ ತುಂಬಿತು ಮತ್ತು ಅವರ ಜೊತೆಗಿನ ರೈತರೂ, ಪ್ರಾಯೋಗಿಕವಾಗಿ ಕಡಿಮೆ ಕ್ಷೇತ್ರದಲ್ಲಿ ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಒಪ್ಪಿಕೊಂಡರು. ಈ ಒಳಸುರಿಗಳು, ಜೈವಿಕ ಗೊಬ್ಬರಗಳು ಮತ್ತು ಜೈವಿಕ ಕೀಟನಾಶಕಗಳು (Azospirillum, Phosphobacteria, Pseudomonas & Trichoderma), ಜೈವಿಕ ನಿಯಂತ್ರಣ ಏಜಂಟ್‌ಗಳು (Trichogramma japonicum,. Trichogramma Chilonis), ಹಸಿರು ಗೊಬ್ಬರ (ಪುಂಡಿ, ಧೈಂಚ, ಅರ್ಕ, ಅವರೆಕಾಯಿ, ಕಪ್ಪು ಜೀರಿಗೆ) ಮತ್ತು ಪ್ರಾಣಿ ಆಧಾರಿತ ಗೊಬ್ಬರಗಳು ಮತ್ತು ಬೆಳವಣಿಗೆ ಪೂರಕಗಳು (ಪಂಚಗವ್ಯ, ಅಮೃತಪಾಣಿ, ವರ್ಮಿ ಕಾಂಪೋಸ್ಟ್, ವರ್ಮಿ ವಾಶ್, ಫಿಶ್ ಅಮಿನೋ ಆಸಿಡ್ಸ್ ಮತ್ತು ಹಣ್ಣಿನ ಸಾರ), ಪಂಜರಗಳು, ಸಸ್ಯಗಳು ಮತ್ತು ವಿವಿಧ ಸತ್ವಭರಿತ ಗೊಬ್ಬರಗಳನ್ನು ಒಳಗೊಂಡಿದ್ದು, ರೈತರಿಗೆ ಪೂರೈಸಲಾಯಿತು.

ಬಯೋಗ್ಯಾಸ್‌ಭರಿತ ಸಗಣಿಯ ಮಹತ್ವವನ್ನು ಎಳ್ಳು, ಸೂರ್ಯಕಾಂತಿ ಮತ್ತು ಶೇಂಗಾ ಬೆಳೆಗಳ ಮೂಲಕ ಐದು ಜಾಗಗಳಲ್ಲಿ ಪ್ರಾತ್ಯಕ್ಷಿಕೆ ಮೂಲಕ ತೋರಿಸಲಾಯಿತು. ಜೈವಿಕ ಅನಿಲ ಸಗಣಿ ಶ್ರೀಮಂತವಾಗಿ ಸಾರಜನಕ ಹೊಂದಿದ್ದು, ಪೌಷ್ಠಿಕಾಂಶವನ್ನು ಕರಗಿಸಿಕೊಳ್ಳಬಲ್ಲ ಬ್ಯಾಕ್ಟೀರಿಯ ಮತ್ತು ಫಂಗಸ್‌ಗಳಿಂದ ಕೂಡಿತ್ತು ಹಾಗೂ ಈ ತಂತ್ರಜ್ಞಾನ ಮತ್ತು ಅದರ ಬಳಕೆಯ ಪ್ರಾತ್ಯಕ್ಷಿಕೆಯನ್ನು ವಿವಿಧ ಸಾವಯವ ಒಳಸುರಿಗಳಿಗೆ ಹೆಚ್ಚುವರಿಯಾಗಿ ತೋರಿಸಲಾಯಿತು. ಕುಲಿತಲೈ ಮತ್ತು ಕಡಲೂರು ಬ್ಲಾಕ್‌ಗಳ ಪುಲುತೇರಿ, ಸೀತಾಪಟ್ಟಿ, ವಡಸೇರಿ, ತರಗಂಪಟ್ಟಿ ಮತ್ತು ಆರ್.ಟಿ.ಮಲೈ ಗ್ರಾಮಗಳ ರೈತರು ಈ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿದ್ದರು.

## ಅಧಿಕ ಜಾಗೃತಿ

ಹೆಚ್ಚಿನ ಜಾಗೃತಿ ಮೂಡಿಸುವ ಸಲುವಾಗಿ ಪ್ರದರ್ಶನಗಳು, ಮಾಧ್ಯಮ ಕಾರ್ಯಕ್ರಮಗಳು ಮತ್ತು ಪ್ರತ್ಯಕ್ಷ ಭೇಟಿಗಳನ್ನು ಸಂಘಟಿಸಲಾಯಿತು. ಇದರಲ್ಲಿ 760ಕ್ಕಿಂತ ಹೆಚ್ಚು ರೈತರನ್ನು, 2006ರಿಂದ 2008ರ ಅವಧಿಯಲ್ಲಿ 14 ಭೇಟಿಗಳಲ್ಲಿ, ಸಾವಯವ ಕೃಷಿ ಪರಿಕಲ್ಪನೆಗೆ ತೆರೆದಿಡಲಾಯಿತು. 2006ರಿಂದ 2008ರವರೆಗೆ ಸುಮಾರು 21 ಪ್ರದರ್ಶನಗಳನ್ನು ಏರ್ಪಡಿಸಿದ್ದು, ಸುಮಾರು 2000 ರೈತರು ಇದರಲ್ಲಿ ಪಾಲ್ಗೊಂಡಿದ್ದರು. ಮಹಿಳಾ ಕೃಷಿಕರು, ಗ್ರಾಮೀಣ ಯುವಕರು ಮತ್ತು ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು. ಈ ಪ್ರದರ್ಶನಗಳ ಮೂಲಕ ಸಾವಯವ ಕೃಷಿ ಮತ್ತು ಅದರ ಮಹತ್ವದ ಕುರಿತು ಜಾಗೃತಿಯನ್ನು ಕರೂರು ಮತ್ತು ಸುತ್ತಮುತ್ತಲ ಜಿಲ್ಲೆಗಳ ಕೃಷಿಕರಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಲಾಯಿತು ಮತ್ತು ಸಾವಯವ ಕೃಷಿಕರು ಮತ್ತು ಸಾವಯವ ಉತ್ಪನ್ನಗಳ ಗ್ರಾಹಕರ ನಡುವೆ ಅದ್ಭುತವಾದ ಜಾಲ ನಿರ್ಮಿಸಲಾಯಿತು.

ಅದೇ ರೀತಿ, ಸಮುದಾಯ ಮಾಧ್ಯಮಗಳಾದ ರೇಡಿಯೋ, ಟಿವಿ ಮತ್ತು ಸುದ್ದಿಪತ್ರಿಕೆಗಳನ್ನು ಹೆಚ್ಚು ಪ್ರಚಾರಕ್ಕೆ ಬಳಸಲಾಯಿತು. ಫೋಲ್ಡರ್, ಕಿರುಹೊತ್ತಿಗೆ, ಕೈಪಿಡಿಗಳನ್ನು ಪ್ರಕಟಿಸಲಾಯಿತು. ತ್ರೈಮಾಸಿಕ ವಾರ್ತಾಪತ್ರ 'ಆರ್ಗ್ಯಾನಿಕ್ ರಿನೈಸೆನ್ಸ್'ನ್ನು ಪ್ರಕಟಿಸಿ, ಸಾವಯವ ಕೃಷಿ ಕುರಿತಾದ ತಾಜಾ ಮಾಹಿತಿಗಳು ಮತ್ತು ಧೋರಣೆಗಳನ್ನು ಹಂಚಿಕೊಳ್ಳಲಾಯಿತು.

2008ರ ಹೊತ್ತಿಗೆ ನಡೆಸಿದ ಕೆಲವು ರೈತರ ಅಧ್ಯಯನದಲ್ಲಿ, ಜವಾಬು ಕೊಟ್ಟ ಶೇ.83ರಷ್ಟು ಸಾವಯವ ಕೃಷಿಯ ನೀತಿ, ಮಣ್ಣು ಫಲವತ್ತತೆ ಹೆಚ್ಚಿಸುವುದು, ಸಾವಯವ ಕೃಷಿಗೆ ಭೂಮಿ ಆಯ್ಕೆ, ಕೀಟ ಮತ್ತು ರೋಗ ನಿಯಂತ್ರಣ, ಕೊಯ್ಲು ನಂತರದ ತಂತ್ರಜ್ಞಾನಗಳು ಮತ್ತು

ಸಾವಯವ ಆದಾನಗಳ ಉತ್ಪಾದನಾ ಘಟಕ

ಚಿತ್ರ: ಲೇಖಕರು



ದಾಖಲು ಮಾಡುವಿಕೆ ಮತ್ತು ಪ್ರಮಾಣೀಕರಣ ಪ್ರಕ್ರಿಯೆ ಮುಂತಾದ ರೈತರಲ್ಲಿ ಸಾವಯವ ಕೃಷಿಯ ಎಲ್ಲ ವಿಷಯಗಳಲ್ಲಿ ಉನ್ನತ ಜ್ಞಾನ ಇದ್ದಿದ್ದು ಕಂಡುಬಂದಿತು. 2005ರಲ್ಲಿ ಕೇವಲ ಶೇ.42ರಷ್ಟು ಮಾತ್ರ ಈ ಜ್ಞಾನಮಟ್ಟ ತೋರಿಸಿದ್ದು, ಅದಕ್ಕೆ ಹೋಲಿಸಿದಲ್ಲಿ ಇದು ಹೆಚ್ಚು ಕಡಿಮೆ ಎರಡು ಪಟ್ಟು ಹೆಚ್ಚಿತ್ತು. ನಿಯಮಿತ ಅಂತರದಲ್ಲಿ ಕೆವಿಕೆ ನಡೆಸಿದ ಹೆಚ್ಚಿನ ಸಂಖ್ಯೆಯ ತರಬೇತಿಗಳು, ಪ್ರಾತ್ಯಕ್ಷಿಕೆಗಳು, ಮುಂದುವರಿದ ಚಟುವಟಿಕೆಗಳಿಗೆ ಈ ಶ್ರೇಯಸ್ಸು ಸಲ್ಲಬೇಕು.

## ಸಾವಯವ ಪದ್ಧತಿಯನ್ನು ಅಳವಡಿಸಿಕೊಂಡ ತಾಂತ್ರಿಕ ಪ್ರವೀಣರಾಗಿ ಕೃಷಿಕರು

ಬಹಳಷ್ಟು ಜವಾಬುದಾರರು (ಶೇ.85ರಷ್ಟು), ಕ್ಷೇತ್ರ ಆಯ್ಕೆಯಿಂದ ಹಿಡಿದು ಕೊಯ್ಲು ಮತ್ತು ಮಾರುಕಟ್ಟೆವರೆಗೆ ಸಾವಯವ ಕೃಷಿ ಪದ್ಧತಿಯನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡಿರುವುದು ಕಂಡುಬಂತು. 2006ರಲ್ಲಿ 27, 2006ರಲ್ಲಿ 47 ಮತ್ತು 2008ರಲ್ಲಿ 22 ಹೀಗೆ ಒಟ್ಟು 96 ಸಾವಯವ ಉತ್ಪಾದಕರ ಗುಂಪುಗಳನ್ನು ಸಂಘಟಿಸಲಾಯಿತು. ಸುಮಾರು 1930 ಸಾವಯವ ಕೃಷಿಕರು ಈ ಗುಂಪುಗಳಲ್ಲಿ ನೋಂದಾಯಿಸಿಕೊಂಡಿದ್ದರು. ಸರ್ವಸಮ್ಮತದ ಆಧಾರದ ಮೇಲೆ ಪ್ರತಿಯೊಂದು ಗುಂಪಿನಲ್ಲೂ ಒಬ್ಬ ವ್ಯಕ್ತಿಯನ್ನು ನಾಯಕನೆಂದು ಗುರುತಿಸಲಾಗಿತ್ತು ಮತ್ತು ಅವರನ್ನು ಸಾವಯವ ಕೃಷಿ, ದಾಖಲಾತಿ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳು ಹಾಗೂ ಮಾರ್ಕೆಟಿಂಗ್‌ನ ಮಾನದಂಡಗಳನ್ನು ಕುರಿತು ಅವರಿಗೆ ತರಬೇತಿ ನೀಡಲಾಯಿತು. ಈ ರೀತಿ ಗುಂಪಿನ ನಾಯಕರು ತಾಂತ್ರಿಕ ಪ್ರವೀಣರಾದರು ಮತ್ತು ತಂತ್ರಜ್ಞಾನದ ಪ್ರಚಾರ ಮಾಡಿದರು. ಮಾನದಂಡಗಳ ದಾಖಲು ಮಾಡುವಿಕೆ ಮತ್ತು ಅದನ್ನು ಪಾಲಿಸುವಲ್ಲಿ ಅವರು ಜಬಾಬ್ದಾರರಾದರು. 2006ರಲ್ಲಿ, ನಾಲ್ವರು ರೈತರು ತಾಂತ್ರಿಕ ಪ್ರವೀಣರಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಆ ಸಂಖ್ಯೆ 2007ರಲ್ಲಿ 17ಕ್ಕೆ ಮತ್ತು 2008ರಲ್ಲಿ 53ಕ್ಕೇರಿತು. ತಾಂತ್ರಿಕ ಪ್ರವೀಣರಿಂದ ತಂತ್ರಜ್ಞಾನ ಹೆಚ್ಚು ಹರಡಿತು. ಸ್ಥಳೀಯ ಪ್ರದೇಶಕ್ಕೆ ಸೇರಿದ್ದ ಅವರನ್ನು ಒಪ್ಪಿಕೊಂಡು, ನಂಬುತ್ತಿದ್ದರು.

ನೋಂದಾಯಿತ ರೈತರು, ಸಾವಯವ ಕೃಷಿ ಮಾಡಲು ನಿರ್ದಿಷ್ಟ ಜಾಗವನ್ನು ಒದಗಿಸಲಾಯಿತು. ಈ ಸಣ್ಣ ಕ್ಷೇತ್ರದಲ್ಲಿ ಅವರು, ಕೆವಿಕೆ ಸಹಾಯದಿಂದ ಸಾವಯವ ವಿಧಾನಗಳನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದರು. 2006ರಲ್ಲಿ, 116.82 ಹೆಕ್ಟೇರ್ ಪ್ರದೇಶವನ್ನು 532 ನೋಂದಾಯಿತ ರೈತರು ಮಾಡಿದರು. ಭತ್ತ, ಎಳ್ಳು, ಬಾಳೆ, ಸೂರ್ಯಕಾಂತಿ, ಶೇಂಗಾ, ಹೆಸರು, ಉದ್ದು, ಇತ್ಯಾದಿಗಳನ್ನು ಬೆಳೆದರು. 2007ರಲ್ಲಿ, ಸಾವಯವ ಕೃಷಿ ಕ್ಷೇತ್ರ 269.63 ಹೆಕ್ಟೇರ್‌ಗೆ ಹೆಚ್ಚಳವಾಯಿತು.

## ಆತ್ಮವಿಶ್ವಾಸದ ಹೆಚ್ಚಳ

ಬಹಳಷ್ಟು ಸಾವಯವ ಒಳಸುರಿಗಳನ್ನು ಸ್ಥಳೀಯವಾಗಿ ಉತ್ಪಾದಿಸಿ, ಹೊರಗಿನ ಗೊಬ್ಬರದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದರು. ಹೆಚ್ಚು ವ್ಯಾಪಕವಾಗಿ ಬಳಕೆಯಾದ ಸಾವಯವ ಗೊಬ್ಬರವೆಂದರೆ, ಎರೆಹುಳು ಗೊಬ್ಬರ. ಕಾರ್ಯನಿರತ ಕ್ಷೇತ್ರದ 44 ರೈತರು ಎರೆಹುಳು ಗೊಬ್ಬರ ಉತ್ಪಾದನಾ ಘಟಕಗಳನ್ನು ಆರಂಭಿಸಿದರು. ಉತ್ಪಾದನೆಯಾದ ಎರೆಹುಳು ಗೊಬ್ಬರವನ್ನು ಅವರು ತಮ್ಮ ಜಮೀನಿನಲ್ಲಿಯೇ ಉಪಯೋಗಿಸಿದರು. ಉಳಿದ ರೈತರು ತೋಟದ ಗೊಬ್ಬರ, ಜೈವಿಕ ಗೊಬ್ಬರ ಬೆರೆಸಿದ ತೋಟದ ಗೊಬ್ಬರಗಳನ್ನು ಬಳಸಿದರು. 44 ಎರೆಹುಳು ಗೊಬ್ಬರದ ಒಟ್ಟು ಉತ್ಪಾದನಾ ಸಾಮರ್ಥ್ಯ ವರ್ಷಕ್ಕೆ 399 ಟನ್ ಆಗಿದೆ.

ಬಹಳಷ್ಟು ರೈತರು ಪಂಚಗವ್ಯ ಮತ್ತು ಕೀಟ ನಿರೋಧಕಗಳನ್ನು ತಮಗೆ ಅವಶ್ಯವೆನಿಸಿಕೊಂಡಾಗ ಮಾಡಿಕೊಂಡರು. ಸಾವಯವ ಒಳಸುರಿಗಳಿಗೆ ಪೂರಕವಾಗಿ, 2006ರಲ್ಲಿ 18 ಪಂಚಗವ್ಯ ಮತ್ತು ಕೀಟನಿವಾರಕ ಘಟಕಗಳನ್ನು ಸ್ಥಾಪಿಸಲಾಯಿತು, 2008ರಲ್ಲಿ ಈ ಸಂಖ್ಯೆ 56ಕ್ಕೆ ಹೆಚ್ಚಿ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಿತು.

ಸಾವಯವ ಒಳಸುರಿಗಳ ಬಳಕೆಯಿಂದ ಒಳಸುರಿ ವೆಚ್ಚ ಕಡಿಮೆಯಾಯಿತು, ಜೊತೆಗೆ ಸಾವಯವ ಪದ್ಧತಿಯಲ್ಲಿ ಬೆಳೆಸಿದ ಉತ್ಪಾದನೆಗಳಿಗೆ ಹೆಚ್ಚುವರಿ ಬೆಲೆ ದೊರಕಿತು. ಇದರಿಂದಾಗಿ ಹೆಚ್ಚುವರಿ ಒಟ್ಟು ಆದಾಯ ಪ್ರತಿ ಎಕರೆಗೆ, 2006, 2007 ಮತ್ತು 2008ರಲ್ಲಿ ಅನುಕ್ರಮವಾಗಿ ರೂ.1130, ರೂ.1250, ರೂ.1820ರಷ್ಟಾಯಿತು. ವಿವಿಧ ಸಾವಯವ ಉತ್ಪಾದನಾ ಘಟಕಗಳು, ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿತು. ಈ ಸಂಖ್ಯೆ 2006, 2007 ಮತ್ತು 2008ರಲ್ಲಿ ಅನುಕ್ರಮವಾಗಿ 142, 198 ಮತ್ತು 210 ಮಾನವದಿನಗಳು.

## ಗ್ರಾಹಕ ಮತ್ತು ಉತ್ಪಾದಕರ ಕೂಡುಕೊಂಡಿ

ಸಾವಯವ ಕೃಷಿ ಪ್ರದೇಶದ ಹೆಚ್ಚಳದ ಪರಿಣಾಮ, ಕರೂರು ಜಿಲ್ಲೆಯಲ್ಲಿ ಸಾವಯವ ವಸ್ತುಗಳ ಲಭ್ಯತೆ ಕೂಡ ಹೆಚ್ಚಾಯಿತು. ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ವಿವಿಧ ಸ್ಥಳಗಳಲ್ಲಿ ಪ್ರದರ್ಶನಗಳನ್ನು ಆಯೋಜಿಸಲಾಯಿತು. ಜೊತೆಗೆ ಮಾರುಕಟ್ಟೆ ಪ್ರವರ್ತಕರಿಂದ ಉತ್ತೇಜನದ ಜೊತೆಗೆ ಸಾವಯವ ಉತ್ಪನ್ನಗಳ ಮಾರುಕಟ್ಟೆ ಜಾಲ ಕೂಡ ಸೃಷ್ಟಿಯಾಯಿತು. ಕೆವಿಕೆ ಕೂಡ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರದರ್ಶನಗಳಲ್ಲಿ ಪಾಲ್ಗೊಂಡು, ಸಾವಯವ ಎಳ್ಳಿಗೆ ವಿಶೇಷ ಮಾರುಕಟ್ಟೆ ಸೃಷ್ಟಿ ಮಾಡಿತು. ಕೆವಿಕೆ ಬೆಂಬಲದೊಂದಿಗೆ ಸಾವಯವ ಎಳ್ಳು ಮತ್ತು ಸಾವಯವ ಅಕ್ಕಿ ಸಂಸ್ಕರಣಾ ಘಟಕಗಳು ಆರಂಭವಾದವು. ಪ್ರಮಾಣೀಕೃತ ಸಂಸ್ಕರಣಾ ಘಟಕಗಳ ಮೂಲಕ, ಸಂಸ್ಕರಿತ ಉತ್ಪನ್ನಗಳ ಲಭ್ಯತೆ ಜಿಲ್ಲೆಯಲ್ಲಿ ಹೆಚ್ಚಾಯಿತು.

## ಉಪಸಂಹಾರ

ಕೃಷಿ ವಿಜ್ಞಾನ ಕೇಂದ್ರಗಳು ಜ್ಞಾನ ಮತ್ತು ಸಂಪನ್ಮೂಲ ಕೇಂದ್ರಗಳಾಗಿ ಸೇವೆ ಸಲ್ಲಿಸಲು ಸ್ಥಾಪಿಸಲಾಗಿದ್ದು, ಜಿಲ್ಲೆಯ ಕೃಷಿ ಆರ್ಥಿಕತೆ ಹೆಚ್ಚಿಸಲು, ರೈತರ ಜೊತೆ ರಾಷ್ಟ್ರೀಯ ಸಂಶೋಧನಾ ಮತ್ತು ವಿಸ್ತರಣೆಯ ಪದ್ಧತಿಗಳನ್ನು ಜೋಡಿಸುವ ಕಾರ್ಯವೆಸಗುತ್ತಿವೆ. ತಮ್ಮ ಆನ್ವೇಷಣೆಗಳಿಂದ ಕೆವಿಕೆ ಕರೂರ್, ರೈತರು ಪರಿಸರ ಸ್ನೇಹಿ ಮತ್ತು ಸಾವಯವ ಪದ್ಧತಿಗಳನ್ನು ಕೈಗೆತ್ತಿಕೊಳ್ಳಲು ನೆರವು ನೀಡುತ್ತಿದೆ.ವಿವಿಧ ಸಂಸ್ಥೆಗಳಾದ ರಾಜ್ಯ ಕೃಷಿ ವಿಶ್ವವಿದ್ಯಾಲಯ (ಎಸ್‌ಎಯು), ಸಾವಯವ ಕೃಷಿಯ ರಾಷ್ಟ್ರೀಯ ಕೇಂದ್ರ (ಎನ್‌ಸಿಒಎಫ್), ಕೃಷಿ ಮತ್ತು ಸಂಸ್ಕರಿತ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ), ಸಂಸ್ಕರಣಾ ಸಂಸ್ಥೆಗಳು ಮುಂತಾದ ಬಹು ಏಜನ್ಸಿಗಳ ಜೊತೆಜೊತೆಯಾಗಿ ಕೆಲಸ ಮಾಡುವ ವಿಧಾನದಿಂದ ಇದು ಸಾಧ್ಯವಾಗುತ್ತಿದೆ. ಆ ಪ್ರದೇಶದಲ್ಲಿನ ರೈತರು ಈಗ, ಹೆಚ್ಚು ಲಾಭದಾಯಕ ಮತ್ತು ಹೊರ ಒಳಸುರಿಗಳ ಮೇಲಿನ ಕಡಿಮೆ ಅವಲಂಬನೆಯ, ಸಾವಯವ ವಿಧಾನದ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಜ್ಜಾಗಿದ್ದಾರೆ.

■ **S Vallal Kannan**
KVK Karur
Pulutheri village, R T Malai Post,
Kulithalai Taluk, Karur District
Tamil Nadu
E-mail: vallalkannan@yahoo.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 4, ಡಿಸೆಂಬರ್ 2016



ಬೇಳೆ ಬೆಳೆಯುವುದಾಗಿ ಪ್ರತಿಜ್ಞೆ ಸ್ವೀಕರಿಸುತ್ತಿರುವ ರೈತರು

# ಬೇಳೆ ಪಂಚಾಯತ್

## ಬೇಳೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುತ್ತ

**ಸುಸ್ಥಿರ ಉತ್ಪಾದನೆ, ಮೌಲ್ಯವರ್ಧನೆ ಮತ್ತು ಮಾರ್ಕೆಟಿಂಗ್ ವ್ಯವಸ್ಥೆಗಳ ಸ್ಥಾಪನೆಗೆ ಸಮಗ್ರ ವಿಧಾನವೇ ಪಲ್ಸ್ ಪಂಚಾಯತ್ ಅಥವಾ ಬೇಳೆ ಪಂಚಾಯಿತ್. ತಮಿಳುನಾಡಿನ ಕೃಷಿ ಉತ್ಪನ್ನ ಕಂಪನಿ ಅನುಷ್ಠಾನಗೊಳಿಸಿದ ಈ ಉಪಕ್ರಮ, ಬೇಳೆ ಉತ್ಪಾದನೆಯ ಸ್ವಾವಲಂಬನೆಯೆಡೆಗೆ ಸಾಗುತ್ತಿದೆ.**

■ **ಆರ್.ಎಸ್.ಶಾಂತಕುಮಾರ್ ಹೋಪರ್ ಮತ್ತು ಕೆ.ದಚಿನಾಮೂರ್ತಿ**

ಬೇಳೆಗಳು ಜೈವಿಕ ಸಾರಜನಕವನ್ನು ಹಿಡಿದಿಟ್ಟುಕೊಳ್ಳುವ ಅಂತರ್ಗತ ಸಾಮರ್ಥ್ಯವನ್ನು ಹೊಂದಿವೆ; ವಾತಾವರಣದ ಏರುಪೇರುಗಳನ್ನು ತಡೆದುಕೊಳ್ಳಲು ಶಕ್ತವಾಗಿದೆ. ಬಂಜರು ಭೂಮಿಯನ್ನು ಸುಧಾರಿಸಲು ಮತ್ತು ಬೀಳುಬಿದ್ದ ಜಮೀನಿನ ಮಣ್ಣಿನ ಫಲವತ್ತತೆ ಹೆಚ್ಚಿಸಲು ಅದು ಒಂದು ಪರಿಹಾರವಾಗಿದೆ. ಪೌಷ್ಠಿಕಾಂಶಭರಿತ, ಕಠಿಣ ಸನ್ನಿವೇಶಗಳಲ್ಲಿ ಬೆಳೆಯುವ ಅದರ ಸಾಮರ್ಥ್ಯದಿಂದಾಗಿ, ಕಡಿಮೆ ಜಮೀನುಳ್ಳ ಬಡ ರೈತರು ಬೆಳೆಯಲು ಸೂಕ್ತವಾಗಿದೆ.

ಬೇಳೆಗಳ ಉತ್ಪಾದನೆ ಅದನ್ನು ಬೆಳೆಯುವ ಪ್ರದೇಶದ ಪ್ರಮಾಣ ಏಕಪ್ರಕಾರವಾಗಿ ಕುಸಿಯುತ್ತಿದೆ. ಮಳೆಯಾಶ್ರಿತ ಪ್ರದೇಶದಲ್ಲಿ, ಕಡಿಮೆ ಪ್ರದೇಶದಲ್ಲಿ ಬೆಳೆಯುವ ಬೇಳೆ ಉತ್ಪಾದನೆ ಅನೇಕ ನಿರ್ಬಂಧಗಳನ್ನು ಎದುರಿಸುತ್ತಿದೆ. ಅವುಗಳಲ್ಲಿ ಕೆಲವು, ಪ್ರದೇಶದ ಅಭಿವೃದ್ಧಿಯಾಗದಿರುವುದು, ಕಡಿಮೆ ಉತ್ಪಾದನೆ, ಸೂಕ್ತ ಸಮಯಕ್ಕೆ ಒಳಸುರಿಗಳ ಅಲಭ್ಯತೆ, ಕೀಟಗಳಿಗೆ ತುತ್ತಾಗುವಿಕೆ ಮತ್ತು ರೋಗಗಳು, ಅಸಮರ್ಥ ಸಂಗ್ರಹ ಮತ್ತು ಮಾರುಕಟ್ಟೆ ಸಂಯೋಜನೆ, ಚಂಚಲ ಬೆಲೆ, ಬೆಳೆ ವಿಮೆ ಕೊರತೆ ಇತ್ಯಾದಿ. ಭಾರತದಲ್ಲಿ ಬೇಳೆಗಳ ತಲಾ ಲಭ್ಯತೆ ದಿನವೊಂದಕ್ಕೆ, ಪ್ರತಿವ್ಯಕ್ತಿಗೆ ಕೇವಲ 33 ಗ್ರಾಂ (2009–10) ಆಗಿದ್ದು, ವಿಶ್ವ ಆರೋಗ್ಯ ಸಂಸ್ಥೆ ಪ್ರತಿವ್ಯಕ್ತಿಗೆ ದಿನವೊಂದಕ್ಕೆ 80 ಗ್ರಾಂಗಳ ಶಿಫಾರಸು ಮಾಡಿದೆ. ಸ್ಥಳೀಯ ಬೇಡಿಕೆಗಳನ್ನು ಪೂರೈಸಲು ಆಮದಿಗೆ ಮೊರೆ ಹೋಗುವುದು ಸರ್ಕಾರಕ್ಕೆ

ಅನಿವಾರ್ಯವಾಗಿದೆ.

ಉತ್ಪಾದನೆ ಹೆಚ್ಚಿಸಿ, ಸಾಮಾನ್ಯ ಜನರಿಗೆ ಬೇಳೆ ದೊರಕುವಂತೆ ಮಾಡಲು, ಸರ್ಕಾರ, 14 ರಾಜ್ಯಗಳ 171 ಜಿಲ್ಲೆಗಳಲ್ಲಿ 'ಎನ್‌ಎಫ್‌ಎಸ್‌ಎಂ(ರಾಷ್ಟ್ರೀಯ ಆಹಾರ ಭದ್ರತಾ ಮಿಷನ್)– ಬೇಳೆಗಳು' ರೀತಿಯ ಉಪಕ್ರಮಗಳ ಮೂಲಕ ಸುಧಾರಿಸಿದ ತಂತ್ರಜ್ಞಾನ ಮತ್ತು ತೋಟ ನಿರ್ವಹಣಾ ವಿಧಾನಗಳನ್ನು ಉತ್ತೇಜಿಸುತ್ತಿದೆ. ಇತ್ತೀಚೆಗೆ ರೈತರಿಗೆ ಪ್ರೋತ್ಸಾಹ ನೀಡಲು ಭಾರತ ಸರ್ಕಾರ ಪ್ರತಿ ಕ್ವಿಂಟಲ್ ಬೇಳೆಗೆ 200 ರೂ. ಬೋನಸ್ ಕೊಡುವುದಾಗಿ ಪ್ರಕಟಿಸಿದೆ.

ಇಂಡಿಯಾ ಮೊರಾಕ್ಕೋ ಲೆಗ್ಯೂಮ್ ಇನಿಶಿಯೇಟಿವ್ (ಐಎಂಎಫ್‌ಎಲ್‌ಐ) ಮೂಲಕ, ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಸಂಸ್ಥೆ (ಎಂಎಸ್‌ಎಸ್‌ಆರ್‌ಎಫ್), ಭಾರತದ ತಮಿಳುನಾಡು ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಬೇಳೆಯ ಸ್ವಾವಲಂಬನೆ ಸಾಧಿಸುವ ಸಲುವಾಗಿ ಬೇಳೆ ಪಂಚಾಯತ್‌ಗಳನ್ನು ಉತ್ತೇಜಿಸಿದೆ. ಒಸಿಪಿ ಫೌಂಡೇಷನ್, ಮೊರಾಕ್ಕೋ, ದಕ್ಷಿಣ–ದಕ್ಷಿಣ ಸಹಯೋಗದ ಉಪಕ್ರಮವಾಗಿ ಇಂಡಿಯಾ ಮೊರಾಕ್ಕೋ ಫುಡ್ ಲೆಗ್ಯೂಮ್ ಇನಿಶಿಯೇಟಿವ್ (ಭಾರತ– ಮೊರಾಕ್ಕೋ ಆಹಾರ ಕಾಳುಗಳ ಉಪಕ್ರಮ– ಐಎಂಎಫ್‌ಎಲ್‌ಐ) ಎರಡೂ ದೇಶಗಳಲ್ಲಿ ಪಾಲುದಾರರು ಇದರಲ್ಲಿ ಒಳಗೊಂಡಿದ್ದಾರೆ. ಈ ವರದಿ ತಮಿಳುನಾಡಿನಲ್ಲಿ ಎಂಎಸ್‌ಎಸ್‌ಆರ್‌ಎಫ್ ತೆಗೆದುಕೊಂಡಿರುವ ಉಪಕ್ರಮಗಳ ಬಗ್ಗೆ ವಿವರಿಸುತ್ತದೆ.

ಈದಯ್ಯಪಟ್ಟಿ ಪಂಚಾಯತ್, ತಮಿಳುನಾಡಿನ ಅತ್ಯಂತ ಒಣ ಪ್ರದೇಶಗಳಲ್ಲಿ ಒಂದಾದ ಪುದುಕ್ಕೋಟ್ಟಿ ಜಿಲ್ಲೆಯ ಅನ್ನಾವಾಸಲ್ ಬ್ಲಾಕ್‌ನಲ್ಲಿದೆ. ಶೇ.95ರಷ್ಟು ರೈತರು ಸಣ್ಣ ಹಿಡುವಳಿದಾರರು. ಪಂಚಾಯತ್ 79 ತೆರೆದ ಬಾವಿಗಳನ್ನು ಹೊಂದಿದ್ದು, ಭಾಗಶಃ ನೀರಾವರಿ ಸಾಧ್ಯವಾಗಿದೆ. ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ, ಅಕ್ಕಿ, ಸಿರಿಧಾನ್ಯಗಳು, ಉದ್ದಿನಬೇಳೆ ಮತ್ತು ಕಡಲೆಬೀಜ. ಕೆಲವು ರೈತರು ಮಾತ್ರ ಸುಮಾರು 30 ಎಕರೆಯಷ್ಟು ಪ್ರದೇಶದಲ್ಲಿ ಬೇಳೆ ಕೃಷಿ ಮಾಡುತ್ತಿದ್ದರು. ಜೈವಿಕ ಕೈಗಾರಿಕಾ ಜಲಾನಯನ ಚಟುವಟಿಕೆಗಳ ಮೂಲಕ, ಬೀಳುಬಿಡಲಾಗಿದ್ದ ಬಹುತೇಕ ಮಳೆಯಾಶ್ರಿತ ಭೂಮಿಯಲ್ಲೆಲ್ಲ ಕೃಷಿ ಚಟುವಟಿಕೆ ಆರಂಭವಾಗಿದೆ.

ರೈತರ ಮಾರುಕಟ್ಟೆ ಸಮಸ್ಯೆಗಳಿಗೆ ಪರಿಹಾರ ಒಟ್ಟಾಗಿ ಕಂಡುಕೊಳ್ಳಲು, ಇಲ್ಲುಪುರ್ ವ್ಯವಸಾಯೋತ್ಪನ್ನ ಕಂಪನಿ ಲಿಮಿಟೆಡ್(ಐಎಪಿಸಿಎಲ್) 2012ರ ಜನವರಿ 15ರಂದು ನೋಂದಣಿಯಾಯಿತು. ಈದಯ್ಯಪಟ್ಟಿ ಪಂಚಾಯತ್ ಸೇರಿದಂತೆ, 5 ಪಂಚಾಯತ್‌ಗಳ ಒಂದು ಸಾವಿರ ಷೇರುದಾರರ ಮೂಲಕ ಐಎಪಿಸಿಎಲ್ ಸ್ಥಾಪಿಸಲ್ಪಟ್ಟಿತು. ಈಗ ಈದಯ್ಯಪಟ್ಟಿಯ 182 ಕೃಷಿಕರು ಐಎಪಿಸಿಎಲ್‌ನಲ್ಲಿ ಸಾಂಸ್ಥೀಕೃತ ರೈತರಾಗಿದ್ದಾರೆ. ಸುಸ್ಥಿರ ಉತ್ಪಾದನೆ, ಮೌಲ್ಯವರ್ಧನೆ ಮತ್ತು ಮಾರ್ಕೆಟಿಂಗ್ ಗಳ ಮೂಲಕ ರೈತರ ಆದಾಯ ಹೆಚ್ಚಿಸಲು, ಐಎಪಿಸಿಎಲ್ ನಾಲ್ಕು ವಿವಿಧ ಮೌಲ್ಯ ಸರಣಿ ಆಧಾರಿತ ಕೈಗಾರಿಕೆಗಳ ಮೇಲೆ ಗಮನ ಕೇಂದ್ರೀಕರಿಸಿದೆ (ಬೇಳೆಗಳು, ಸಾವಯವ ತರಕಾರಿಗಳು, ಸಮಗ್ರ ಡೈರಿ ಮತ್ತು ಕೋಳಿಸಾಕಣೆ).

2013ರಲ್ಲಿ, ಬೇಳೆ ಕೃಷಿಯನ್ನು ಭಾರಿ ಪ್ರಮಾಣದಲ್ಲಿ ಮಾಡಲು, ಅದರಲ್ಲಿ ಗರಿಷ್ಠ ಲಭ್ಯ ಭೂಮಿಯನ್ನು ಅಂದರೆ, 474 ಎಕರೆ (ನಿವ್ವಳ

ಪ್ರಗತಿಯಲ್ಲಿರುವ ಮಹಿಳೆಯರ ಗುಂಪು ಸಭೆ



ಚಿತ್ರ ಎಂಎಸ್ಎಸ್ಆರ್ಎಫ್

ಕೃಷಿ ಜಮೀನು) ಪ್ರದೇಶವನ್ನು ಒಂದು ಹಂಗಾಮಿನಲ್ಲಿ ಬೇಳೆ ಬೆಳೆಯಲು ತೊಡಗಿಸಲು ಒಪ್ಪಿಗೆ ನೀಡಿ ಠರಾವನ್ನು ಪಾಸು ಮಾಡಿತು. ಮುಂಗಾರು ಹಂಗಾಮಿನಲ್ಲಿ ಸದಸ್ಯರು ಯಶಸ್ವಿಯಾಗಿ ಪ್ರಮಾಣೀಕರಿಸಲ್ಪಟ್ಟ ಬೇಳೆ ಕಾಳುಗಳ ಉತ್ಪಾದನೆ ಮಾಡಲು ಯಶಸ್ವಿಯಾದರು.

ಹತ್ತು ಹಳ್ಳಿಗಳಿಂದ ಕೂಡಿದ ಇಡೀ ಪಂಚಾಯತ್‌ನ್ನು ದೂರಗ್ರಾಹಿ ಸಾಧನಗಳ ಮೂಲಕ ಡಿಜಿಟಲೀಕರಣಗೊಳಿಸಲಾಯಿತು ಮತ್ತು ಬೇಳೆ ಉತ್ಪಾದನೆ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಯಿತು. ಬೇಳೆ ಉತ್ಪಾದನೆಯ ಮೇಲ್ವಿಚಾರಣೆ ಮತ್ತು ಯೋಜನೆಯಲ್ಲಿ ಪಂಚಾಯತ್ ಮತ್ತು ಐಎಪಿಸಿಎಲ್ ತೊಡಗಿಸಿಕೊಂಡಿತು. ಗ್ರಾಮ ಜ್ಞಾನ ಕೇಂದ್ರಗಳಿಗೆ ಮತ್ತು ಕೃಷಿ ಉಪಕರಣಗಳನ್ನು ಬಾಡಿಗೆಗೆ ಪಡೆಯುವಲ್ಲಿ ಅಗತ್ಯವಾದ ಮೂಲಸೌಕರ್ಯಗಳನ್ನು ಪಂಚಾಯತ್ ಒದಗಿಸಿತು. ತಾಂತ್ರಿಕ ತುರ್ತು ಅಗತ್ಯಗಳ ನೆರವನ್ನು ರಾಷ್ಟ್ರೀಯ ಬೇಳೆ ಸಂಶೋಧನಾ ಸ್ಟೇಷನ್, ವಾಂಬನ್, ಸರ್ಕಾರದ ಕೃಷಿ ಇಲಾಖೆ ಮತ್ತು ಎಂಎಸ್‌ಎಸ್‌ಆರ್‌ಎಫ್ ಒದಗಿಸಿತು.

ವಿವಿಧ ಬೆಳೆ ಮತ್ತು ವ್ಯಾಪಾರ ಮಾದರಿಗಳ ಮೌಲ್ಯ ಸರಣಿ ವಿಶ್ಲೇಷಣೆ (ವ್ಯಾಲ್ಯೂ ಚೈನ್ ಅನಾಲಿಸಿಸ್) ಆಧಾರದ ಮೇಲೆ ಐಎಪಿಸಿಎಲ್ ಉತ್ತೇಜಿಸಿತು. ಎಲ್ಲ ಚಟುವಟಿಕೆಗಳೂ ಐಎಪಿಸಿಎಲ್ ಮೂಲಕ ನಡೆಸಲಾಯಿತು. ಐಎಪಿಸಿಎಲ್ ಪಾತ್ರ ಹೀಗಿದೆ:

ಗುಣಮಟ್ಟದ ಬೀಜಗಳು, ಜೈವಿಕ ಗೊಬ್ಬರಗಳು, ಕೃಷಿ ಉಪಕರಣಗಳ ಬಾಡಿಗೆ ಇವುಗಳ ಒಳಸುರಿ ಪೂರೈಕೆ

ಉತ್ಪನ್ನಗಳನ್ನು ಪಡೆಯುವುದು, ಸಂಗ್ರಹ ಮತ್ತು ಮಾರ್ಕೆಟಿಂಗ್

ಬ್ಯಾಂಕುಗಳ ಸಂಯೋಜನೆಯೊಂದಿಗೆ ಸಾಲ ಪಡೆಯಲು ಅವಕಾಶ

ಗ್ರಾಮ ಜ್ಞಾನ ಕೇಂದ್ರಗಳ ಮೂಲಕ ಜ್ಞಾನ ಸಬಲೀಕರಣಕ್ಕೆ ಅವಕಾಶ

ಮೌಲ್ಯವರ್ಧನೆಗಾಗಿ ಉತ್ಪನ್ನಗಳ ಸಂಸ್ಕರಣೆಗೆ ಅವಕಾಶ ಕಲ್ಪಿಸಿಕೊಡುವುದು

ವಿವಿಧ ಭಾಗೀದಾರರು ಮತ್ತು ಎಂಎಸ್‌ಎಸ್‌ಆರ್‌ಎಫ್‌ನೊಂದಿಗೆ ಸಂಯೋಜನೆ

**ಕೋಷ್ಟಕ 1: ಉಪಜಾತಿ ತಳಿಗಳ ಆಯ್ಕೆ ಪ್ರಯೋಗಗಳು 2015–16**

| ಬೇಳೆ ಬೆಳೆ | ಪರೀಕ್ಷಿಸಲ್ಪಟ್ಟ ಬೇಳೆ ಉಪಜಾತಿ | ಉತ್ತಮ ನಿರ್ವಹಣೆ ತೋರಿದ ಉಪಜಾತಿ |
|---|---|---|
| ಉದ್ದು | ಮುಂಗಾರು- ವಿಬಿಎನ್4, ಎಡಿಟಿ-5, ಎಂಡಿಯು-1<br>ಹಿಂಗಾರು- ವಿಬಿಎನ್ 4, ವಿಬಿಎನ್ 6 | ಮುಂಗಾರು ಮತ್ತು ಹಿಂಗಾರು ವಿಬಿಎನ್ 4 |
| ಹೆಸರು | ಮುಂಗಾರು- ಸಿಒ 8, ವಿಬಿಎನ್3, ವಿಆರ್‌ಎಂ-1<br>ಹಿಂಗಾರು- ವಿಬಿಎನ್3, ಸಿಒ 8, ವಿಆರ್‌ಎಂ -1, ಬಿಜಿಎಸ್ 9, ಎಂಎಲ್618 | ಮುಂಗಾರು- ಸಿಒ 8, ವಿಬಿಎನ್3<br>ಹಿಂಗಾರು- ವಿಬಿಎನ್3 |
| ಕಡಲೆ | ಮುಂಗಾರು- 37 ಎಕರೆ ಕಡಲೆ ಬೀಜದೊಂದಿಗೆ ಅಂತರಬೆಳೆ<br>ಹಿಂಗಾರು- ವಿಬಿಎನ್ 2, ಐಸಿಪಿಎಲ್ 1124, 161, 20335, 88039 | ಹಿಂಗಾರು ಐಸಿಪಿಎಲ್ 88039 |
| ಕಡಲೆಬೀಜ | ಮುಂಗಾರು- ಸಿಒ 7, ಪೊಲ್ಲಾಚಿ 1, ವಿಆರ್‌ಐ2<br>ಹಿಂಗಾರು- ವಿಆರ್‌ಐ 2, ಕೆ 6, ಸಿಒ4, ಟಿಎಂವಿ7, ಜಿ2 | ಮುಂಗಾರು- ಸಿಒ7 ಮತ್ತು ವಿಆರ್‌ಐ2<br>ಹಿಂಗಾರು - ವಿಆರ್‌ಐ2 |

ಜಾಗೃತಿ ಕಾರ್ಯಕ್ರಮಗಳು, ಸಹಭಾಗಿತ್ವದ ವೈವಿಧ್ಯಮಯ ಆಯ್ಕೆ (ಪಾರ್ಟಿಸಿಪೇಟರಿ ವೆರೈಟಲ್ ಪ್ರೋಸೆಸ್– ಪಿವಿಎಸ್), ರೈತರ ಹೊರಾಂಗಣ ಶಾಲೆಗಳು (ಎಫ್‌ಎಫ್‌ಎಸ್), ರೈತರ ಹೊರಾಂಗಣ ದಿನಗಳು, ವ್ಯವಸಾಯೋತ್ಪನ್ನ ಗುಂಪುಗಳೊಂದಿಗೆ ಚರ್ಚಾ ವೇದಿಕೆಗಳು, – ಇವೇ ಮುಂತಾದ ಉಪಕ್ರಮಗಳು ತಮ್ಮ ಸ್ವಂತ ವ್ಯವಸಾಯೋತ್ಪನ್ನ ಕಂಪನಿ ಆರಂಭಿಸುವುದರ ಮೂಲಕ ಸುರಕ್ಷಿತ ಮಾರುಕಟ್ಟೆ, ವ್ಯವಸಾಯೋತ್ಪನ್ನ ಕಂಪನಿಯಿಂದ ಉತ್ತಮ ಬೆಲೆ ಪಡೆಯುವ ಸಾಧ್ಯತೆಗಳನ್ನು ಖಾತ್ರಿಪಡಿಸಿದವು. ಬೇಳೆ ಕೃಷಿಯಲ್ಲಿ ರೈತರು ಭಾಗವಹಿಸಲು ಉತ್ತೇಜನ ನೀಡಿದವು. ಕೆಲವೊಂದನ್ನು ಇಲ್ಲಿ ವಿವರಿಸಲಾಗಿದೆ.

## ರೈತ– ಸಹಭಾಗಿ ತಳಿ ಆಯ್ಕೆ (ಫಾರ್ಮರ್– ಪಾರ್ಟಿಸಿಪೇಟರಿ ವೆರೈಟಲ್ ಸೆಲೆಕ್ಷನ್ ಟ್ರಯಲ್ಸ್) (ಎಫ್‌ಪಿವಿಎಸ್‌ಟಿ)

ಈ ಪ್ರದೇಶದಲ್ಲಿ ಉತ್ತಮವಾಗಿ ನಿರ್ವಹಿಸಬಲ್ಲ ಬೇಳೆ ತಳಿಗಳನ್ನು ಕಂಡುಹಿಡಿಯಲು ಒಟ್ಟು 41 ರೈತ–ಸಹಭಾಗಿ ತಳಿ ಆಯ್ಕೆ ಪ್ರಯೋಗಗಳನ್ನು ನಡೆಸಲಾಯಿತು. ವಿವಿಧ ಸಂಸ್ಥೆಗಳು– ಕೃಷಿ ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ರೈತರಿಂದ ವಿವಿಧ ಪ್ರಭೇದದ ತಳಿಗಳನ್ನು ಪಡೆದುಕೊಳ್ಳಲಾಯಿತು. ಪ್ರತಿಯೊಂದು ಪಿವಿಎಸ್ಪಿ ಪ್ರಕ್ರಿಯೆಯೂ, ಬೆಳೆಯ ಐದು ನಿರ್ಣಾಯಕ ಹಂತದಲ್ಲಿ 20 ಅಭಿವೃದ್ಧಿಪರ ರೈತರನ್ನು ಒಳಗೊಂಡಿತ್ತು. ಉದ್ದಿನಬೇಳೆಯಲ್ಲಿ ವಾಂಬನ್ 4 ಮತ್ತು 6 ಹಾಗೂ ಎಂಡಿಯು 1, ಹುರಳಿ ಕಾಳಿನಲ್ಲಿ ವಾಂಬನ್ 3 ಮತ್ತು ಸಿಒ 8 ಹಾಗೂ ಸಿಒ 6 ಮತ್ತು ಎಲ್‌ಆರ್‌ಜಿ 41 ಕಡಲೆ ತಳಿಗಳು ಉತ್ತಮ ನಿರ್ವಹಣೆ ತೋರಿದವು. ಈ ಪ್ರಯೋಗಗಳ ನಂತರ ಫಾರ್ಮರ್ ಫೀಲ್ಡ್ ಡೇ ಆಯೋಜಿಸಿ, ಬೆಳೆಯ ಐದು ನಿರ್ಣಾಯಕ ಹಂತದಲ್ಲಿನ 10 ವಿಮರ್ಶಾತ್ಮಕ ಮಾನದಂಡಗಳ ಆಧಾರದ ಮೇಲೆ ಸೂಕ್ತ ತಳಿಯನ್ನು ಆರಿಸಿಕೊಳ್ಳಲು ಅವಕಾಶ ಒದಗಿಸಲಾಯಿತು.

## ಹವಾಮಾನ ಸೂಕ್ತ ಕೃಷಿ ವಿಧಾನಗಳ ಉತ್ತೇಜನ

ಭತ್ತದ ಕೊಯ್ಲಿನ ನಂತರ ಅಲ್ಲಿ ಬೇಳೆ ಬೆಳೆಯಲು ಉತ್ತೇಜನ ನೀಡಿದ್ದರಿಂದ, ಬೇಳೆ ಬೆಳೆಯಲು ಹೆಚ್ಚುವರಿ ಜಮೀನು (ಶೇ.40) ಲಭ್ಯವಾಯಿತು. ಎರಡು ಮುಖ್ಯ ಬೆಳೆಯ ನಡುವಿನ ಸಮಯದಲ್ಲಿ ಬೆಳೆಯಲು ಅಲ್ಪಾವಧಿಯ ತಳಿಗಳ ಬೇಳೆಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು. ಇದರಲ್ಲಿ ಸಾಂಪ್ರದಾಯಿಕ ತಳಿಗಿಂತ ಶೇ.30ರಷ್ಟು ಹೆಚ್ಚು ಉತ್ಪಾದನೆ, ಹಾಗೆಯೇ ಆದಾಯಕ್ಕೆಡೆ ಮಾಡಿಕೊಟ್ಟಿತು. ಸುಧಾರಿತ ಕೃಷಿಕರ ತಳಿ ಬದಲು ದರ (ವೆರೈಟಲ್ ರೀಪ್ಲೇಸ್ಮೆಂಟ್ ರೇಟ್) ಶೇ.70ರಷ್ಟು ಹೆಚ್ಚಾಯಿತು. ಒಳಸುರಿಗಳು ಮತ್ತು ಸಾಲದ

**'ಬೇಳೆ ಜೈವಿಕ ಪಾರ್ಕ್', ಐಎಪಿಸಿಎಲ್ ನಿರ್ವಹಿಸುತ್ತಿರುವ ಪಾರ್ಕ್ ಮೌಲ್ಯ ಸರಣಿ ವಿಶ್ಲೇಷಣೆ ಆಧರಿತವಾಗಿದ್ದು, ಗ್ರಾಹಕರ ಹಣದಲ್ಲಿ ಬೇಳೆ ಕೃಷಿಕರ ಪಾಲನ್ನು ಗಣನೀಯವಾಗಿ ಹೆಚ್ಚಿಸಿದೆ.**

**ಕೋಷ್ಟಕ 2: ಉದ್ದಿನ ಕಾಳಿನ ಆರ್ಥಿಕತೆ 2015-16**

| ತಳಿ | ನವೀನ ತಂತ್ರಜ್ಞಾನಗಳಿಂದ ಸುಧಾರಿತ ತಳಿ -ವಿಬಿಎನ್ 4 (ರೂ.) | ಸಾಂಪ್ರದಾಯಿಕ ವಿಧಾನಗಳೊಂದಿಗೆ ಸ್ಥಳೀಯ ತಳಿ - ಟಿ9 (ರೂ.) |
|---|---|---|
| ಬೇಸಿಗೆ ಉಳುವಿಕೆ | 550 | – |
| ಎಫ್‌ವೈಎಂ ಬಳಕೆ (2 ಟ್ರಾಕ್ಟರ್ ಲೋಡ್) | 3600 | – |
| ಬಿತ್ತುವ ಮುನ್ನ ಉಳುವಿಕೆ (2 ಬಾರಿ) | 900 | 1100 |
| ಬೀಜದ ಪ್ರಮಾಣ (ಕೆ.ಜಿ/ಎಕರೆ) | 900 (6ಕೆ.ಜಿ) | 1200 (8 ಕೆ.ಜಿ) |
| ಬೀಜೋಪಚಾರ | 50 | - |
| ಬೀಜ ಬಿತ್ತನೆ | 500 (ಯಾಂತ್ರಿಕ ಬಿತ್ತನೆ) | 200 |
| ಬೆಳೆ ತೆಗೆಯುವ ವೆಚ್ಚ | 600 | 2000 |
| ಪೌಷ್ಠಿಕಾಂಶ ಮತ್ತು ಕೀಟನಾಶಕ ಸಿಂಪಡಿಕೆ | 1000 | 500 |
| ಕೊಯ್ಲು ಮತ್ತು ಬೀಜ ಬೇರ್ಪಡಿಕೆ | 2000 | 2000 |
| ಒಟ್ಟು ಫಸಲು (ಕೆ.ಜಿ/ಎಕರೆ) | 350 | 140 |
| ನಿವ್ವಳ ಆದಾಯ (ರೂ./ಎಕರೆ) | 31500 | 12600 |
| ಒಟ್ಟು ವೆಚ್ಚ (ರೂ./ಎಕರೆ) | 10100 | 7000 |
| ಒಟ್ಟು ಆದಾಯ ರೂ./ಎಕರೆ | 21400 | 5600 |
| ಒಟ್ಟು ಲಾಭ- ರೂ.21400/ಎಕರೆ | | |

ನೆರವು ಐಎಪಿಸಿಎಲ್ ಮೂಲಕ ದೊರೆಯಿತು. ಹವಾಮಾನ ವೈಪರೀತ್ಯಕ್ಕೆ ತಕ್ಕನಾದ ವಿವಿಧ ವಿಧಾನಗಳೊಂದಿಗೆ ಹೊಸ ಸುಧಾರಿತ ತಳಿಗಳನ್ನು ಅಳವಡಿಸಿಕೊಳ್ಳಲು ರೈತರನ್ನು ಶಕ್ತರನ್ನಾಗಿ ಮಾಡಲಾಯಿತು. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್), ಮುಂಬೈ, ಏಷಿಯಾ ಇನಿಶಿಯೇಟಿವ್ಸ್, ಯುಎಸ್‌ಎಗಳ ಸಿಎಸ್‌ಆರ್ ನಿಧಿಯ ಪ್ರಯೋಜನ ಪಡೆದು, ವಿಶೇಷವಾಗಿ ಹಿಂಗಾರಿನಲ್ಲಿ ಬೇಳೆ ಕೃಷಿಗೆ, ಉತ್ತಮ ಬೀಜಗಳ ಉತ್ಪಾದನೆಗೆ, ಎಲ್ಲರಿಗೂ ಸಮನಾಗಿ ನೀರು ಹಂಚಿಕೆಯಾಗುವಂತೆ ಮಾಡಲು 30 ತೆರೆದ ಬಾವಿಗಳನ್ನು ಪುನರುಜ್ಜೀವನಗೊಳಿಸಲಾಯಿತು. ಇದರಿಂದ 50 ಎಕರೆಗಿಂತಲೂ ಹೆಚ್ಚು ಬೀಳುಬಿದ್ದ ಜಮೀನು ಕೃಷಿಯೋಗ್ಯವಾಯಿತು.

ಹೊಸ ಹವಾಮಾನಸೂಕ್ತ ಕೃಷಿ ತಂತ್ರಜ್ಞಾನಗಳಾದ ಗುಣಮಟ್ಟದ ಬೀಜ ಪಡೆಯುವಿಕೆ, ಕೀಟ ಮತ್ತು ರೋಗನಿರೋಧಕ ತಳಿಗಳನ್ನು ಬೆಳೆಯುವುದು, ಮಣ್ಣು ಆರೋಗ್ಯ ಕಾರ್ಡ್‌ಗಳ ಆಧಾರದ ಮೇಲೆ ಪೌಷ್ಠಿಕಾಂಶ ನಿರ್ವಹಣೆ, ಡಿಎಪಿ (ಡೈ ಅಮೋನಿಯಂ ಫಾಸ್ಫೇಟ್)ಯನ್ನು ಎಲೆಗಳ ಮೇಲೆ ಸಿಂಪಡಿಸುವಿಕೆ, ಪಲ್ಸ್ ವಂಡರ್ (ಪೌಷ್ಠಿಕಾಂಶ ಮತ್ತು ಬೆಳವಣಿಗೆ ನಿಯಂತ್ರಕಗಳ ವರ್ಧಕ) ಬಳಕೆ, ಸಾಲು ನೆಡುವಿಕೆ, ಅಂತರಬೆಳೆ, ನೀರು ನಿರ್ವಹಣೆ, ಸಂಸ್ಕರಣೆ ಇತ್ಯಾದಿಗಳಲ್ಲಿ ರೈತರ ಕ್ಷೇತ್ರ ಶಾಲೆ ಅವರಿಗೆ ತರಬೇತಿ ನೀಡಿತು.

ರೈತರು, ವಿಜ್ಞಾನಿಗಳು, ಯೋಜನಾ ಸಿಬ್ಬಂದಿ ಮತ್ತು ಸರ್ಕಾರ ಇಲಾಖೆಗಳ ಸಿಬ್ಬಂದಿಗಳ ನಡುವೆ ಬೇಳೆ ಕೃಷಿಯ ಬಗ್ಗೆ ರೈತರ ಹೊರಾಂಗಣ ದಿನಗಳು ಅನುಭವ ಹಂಚಿಕೊಂಡು ಅದನ್ನು ಪ್ರಚಾರ ಮಾಡುವಲ್ಲಿ ಸಾಧ್ಯವಾಯಿತು. ವಿವಿಧ ಬೇಳೆಗಳ ಫಸಲು ಪ್ರಮಾಣ ರಾಜ್ಯ ಮತ್ತು ರಾಷ್ಟ್ರೀಯ ಸರಾಸರಿಗಿಂತ ಶೇ.50ಕ್ಕಿಂತ ಹೆಚ್ಚಿಗೆ ಇತ್ತು.

### ಬೀಜಪದ್ಧತಿ ಮತ್ತು ನಿರ್ವಹಣೆಗೆ ಉತ್ತೇಜನ

ಉತ್ತಮ ಗುಣಮಟ್ಟದ ಬೀಜ ಪೂರೈಕೆಗಾಗಿ ಸಂಪೂರ್ಣ ಕಾರ್ಯನಿರತ ಮತ್ತು ಸುಸ್ಥಿರ ಬೇಳೆ ಕಾಳು ಪೂರೈಕೆ ಪದ್ಧತಿ ಅತ್ಯಂತ ಮಹತ್ವದ್ದು. ರೈತರ ಮಟ್ಟದಲ್ಲಿ ಪ್ರಮಾಣೀಕೃತ/ಉತ್ಕೃಷ್ಟ ಬೀಜಗಳ ಬೇಡಿಕೆಯನ್ನು ಪೂರೈಸಲು, ಬೇಳೆ ಕಾಳು ಮೌಲ್ಯ ಸರಪಣಿ ಪದ್ಧತಿಯನ್ನು ಐಎಪಿಸಿಎಲ್ ಸ್ಥಾಪಿಸಿತು. ಬೀಜ ಬದಲು ದರ (ಎಸ್ ಆರ್ ಆರ್) ಶೇ.40ಕ್ಕೂ ಹೆಚ್ಚು ಪ್ರಮಾಣದಲ್ಲಿ ಅಧಿಕಗೊಂಡಿತು. 10 ಟನ್ ಗುಣಮಟ್ಟದ ಬೀಜಗಳನ್ನು ಐಎಪಿಸಿಎಲ್ ಸಂಗ್ರಹಿಸಿ, ಶೇಖರಿಸಿತು. ಇದನ್ನು ಸರ್ಕಾರದ ಏಜನ್ಸಿಗಳು ಮತ್ತೆ ಪ್ರಮಾಣೀಕರಿಸಿದರು. ಹೀಗೆ, ಕಡಿಮೆ ವೆಚ್ಚದ ಹೊಸತಾದ ಬೀಜ ಪದ್ಧತಿಗಳು ಮತ್ತು ರೈತ-ಸಹಭಾಗಿ ತಳಿ ಆಯ್ಕೆ ಪದ್ಧತಿ (ಎಫ್‌ಪಿವಿಎಸ್) ಮೂಲಕ ಬದಲಾದ ಆಯ್ದ ರೈತರ ಆದ್ಯತಾ ತಳಿಗಳು, ಪ್ರೋತ್ಸಾಹಯುತ ಫಲಿತಾಂಶಗಳನ್ನು ತಂದುಕೊಟ್ಟವು.

ಕಾಳು ಸಂಗ್ರಹಿಸಲು ಮೂರು ಪದರಗಳ ಪರ್ಡ್ಯೂ ಅಭಿವೃದ್ಧಿಪಡಿಸಿದ ಬೆಳೆ ಸಂಗ್ರಹ (ಪ್ರಾಥಮಿಕವಾಗಿ ಪರ್ಡ್ಯೂ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿದ್ದು – ಪಿಐಸಿಎಸ್) ಚೀಲದ ಪ್ರಾತ್ಯಕ್ಷಿಕೆ ನಡೆಸಲಾಯಿತು. ಕೀಟಗಳ ಕಾರಣದಿಂದ ಬೆಳೆ ಸಂಗ್ರಹದ ಸಮಯದಲ್ಲಿ ಆಗುವ ಕಾಳುಗಳ ಗುಣಮಟ್ಟ ನಷ್ಟದಲ್ಲಿ ಗಣನೀಯ ಕಡಿಮೆಯಾಗಿತ್ತು. ಈ ಸಂಗ್ರಹ ಪದ್ಧತಿಯಲ್ಲಿ ಬೀಜದ ಗುಣಮಟ್ಟ ಸಂರಕ್ಷಣೆ ಜೊತೆಗೆ ಬೀಜದ ಬದುಕುವ ಸಾಮರ್ಥ್ಯವನ್ನು ಹೆಚ್ಚಿಸಿತು.

### ಬೇಳೆ ಜೈವಿಕ ಪಾರ್ಕ್

ಬೇಳೆ ಜೈವಿಕ ಪಾರ್ಕ್‌ಗಳು, ಮೌಲ್ಯ ಸರಪಳಿ ವಿಶ್ಲೇಷಣೆ ಆಧಾರದ ಮೇಲೆ, ಎಂಎಸ್‌ಎಸ್‌ಆರ್‌ಎಫ್ ಮತ್ತು ಇತರೆ ಭಾಗೀದಾರರ ನೆರವಿನೊಂದಿಗೆ ಐಎಪಿಸಿಎಲ್ ಅನುಷ್ಠಾನಗೊಳಿಸಿದೆ. ಒಂದು ದಾಲ್ ಮಿಲ್‌ನ್ನು ಸ್ಥಾಪಿಸಿದ್ದು, ಪ್ರಾಥಮಿಕ ಸಂಸ್ಕರಣಾ ಫಲಿತಾಂಶ ಪ್ರೋತ್ಸಾಹಕರವಾಗಿತ್ತು ಮತ್ತು ಸಣ್ಣ ಮತ್ತು ಪರಿಮಿತ ಕೃಷಿಕರು ತಮ್ಮ ಉತ್ಪನ್ನವನ್ನು ಸಂಸ್ಕರಿಸಲು ಇದರ ಪ್ರಯೋಜನ ಪಡೆದುಕೊಂಡರು. ಸಂಸ್ಕರಿತ ಬೇಳೆಯನ್ನು ಸ್ವಚ್ಛಗೊಳಿಸಿ, ಪ್ಯಾಕ್ ಮಾಡಿ, ಬ್ರಾಂಡ್ ಸಹಿತವಾಗಿ ಮುಕ್ತ ಮಾರುಕಟ್ಟೆಗೆ ಬಿಡಲಾಯಿತು. ವಿವಿಧ ಬೇಳೆಗಳಿಗೆ ಚಾಲ್ತಿಯಲ್ಲಿರುವ ಮತ್ತು ನವೀನ ಮೌಲ್ಯ ಸರಪಳಿಗಳನ್ನು ದಾಖಲಿಸುವುದರಿಂದ ಬೇಳೆ ಉತ್ಪಾದನೆಯನ್ನು ಹೆಚ್ಚಿಸಲು, ಮಾರಲು, ಮತ್ತು ಸುಸ್ಥಿರತೆ ತರಲು ಸಾಧ್ಯವಾಗುತ್ತದೆ.

### ಜ್ಞಾನ ನಿರ್ವಹಣೆ

ಐಸಿಟಿ ಸಾಧನಗಳನ್ನು ಬಳಸಿ, ರೈತರ ಹೊರಾಂಗಣ ಶಾಲೆಗಳು ಮತ್ತು ವ್ಯವಸಾಯೋತ್ಪನ್ನಗಳ ಕ್ಷೇತ್ರ ಪ್ರದರ್ಶನಗಳ (ಫಾರ್ಮರ್ ಫೀಲ್ಡ್ ಡೇಸ್) ಮೂಲಕ ಜ್ಞಾನ ನಿರ್ವಹಣೆಯನ್ನು ಐಎಪಿಸಿಎಲ್ ನಿರ್ವಹಿಸುತ್ತಿರುವ ಗ್ರಾಮ ಜ್ಞಾನ ಕೇಂದ್ರಗಳ ಮೂಲಕ ಏಕೀಕೃತಗೊಳಿಸಲಾಯಿತು. ಸೂಕ್ತ ಸಮಯದಲ್ಲಿ ಮತ್ತು ಕೈಗೆಟುವ ದರದಲ್ಲಿ ಕೃಷಿ ಉಪಕರಣ ಬಾಡಿಗೆಯ ನೆರವು ಸೇವೆ ಸಣ್ಣ ಹಿಡುವಳಿದಾರರಿಗೆ ಅರ್ಥಿಕವಾಗಿ ಪ್ರಯೋಜನಕರವಾಯಿತು. ಜ್ಞಾನ ಕೇಂದ್ರಗಳು ಸೂಕ್ತ ಸಮಯದಲ್ಲಿ ಮತ್ತು ಹವಾಮಾನಕ್ಕೆ ಒಪ್ಪವಾದ, ನಿರ್ದಿಷ್ಟ ಸ್ಥಳದ ಕೃಷಿ ತಂತ್ರಜ್ಞಾನ, ಬೆಳೆ ವಿಮೆ, ಮಣ್ಣು ಆರೋಗ್ಯ ರಕ್ಷಣಾ ಕ್ಲಿನಿಕ್, ಮಾರುಕಟ್ಟೆ ಬೆಲೆ, ಸಸ್ಯ ಮತ್ತು ಪ್ರಾಣಿ ಆರೋಗ್ಯ ಕೇಂದ್ರಗಳು, ಮುಂಗಾರು ವರ್ತನೆ, ಫೋನ್-ಇನ್ ಕಾರ್ಯಕ್ರಮಗಳು ಮತ್ತು ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸಿದವು.

ಬೇಳೆ ಉತ್ಪಾದನೆ ಹೆಚ್ಚಿಸಲು, 2000ಕ್ಕೂ ಹೆಚ್ಚು ರೈತರಿಗೆ ಧ್ವನಿ ಮತ್ತು ಬರಹ ಸಂದೇಶಗಳನ್ನೂ ಬಳಕೆ ಮಾಡಿಕೊಂಡಿತು.

## ಕೊನೆಯದಾಗಿ..

ಬಹು ಭಾಗೀದಾರರ ವೇದಿಕೆಗಳು ಮತ್ತು ನೀತಿ ರಚನಾ ಜಾಲಗಳ ಮೂಲಕ ಜ್ಞಾನ ನಿರ್ವಹಣೆ ಹೆಚ್ಚಿಸಲು ನೂತನ ವಿಧಾನಗಳು, ಬೇಳೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಸಮಸ್ಯೆಗಳ ಪರಿಹಾರ ಸೂಚಿಯ ಮೂಲಾಂಶವಾಗಿದೆ ಎಂದು ಬೇಳೆ ಪಂಚಾಯತ್ ಚಳವಳಿ ಪ್ರದರ್ಶಿಸಿದೆ. ಬೇಳೆ ಜೈವಿಕ ಪಾರ್ಕ್, ಐಎಪಿಸಿಎಲ್ ನಿರ್ವಹಿಸುತ್ತಿರುವ ಮೌಲ್ಯ ಸರಪಳಿ ವಿಶ್ಲೇಷಣೆ ಆಧರಿತವಾಗಿದ್ದು, ಗ್ರಾಹಕರ ಹಣದಲ್ಲಿ ಬೇಳೆ ಬೆಳೆಗಾರರ ಪಾಲನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದೆ. ಸುಗ್ಗಿ  ನಂತರದ ನಷ್ಟವನ್ನೂ ಇದು ಗಣನೀಯ ಪ್ರಮಾಣದಲ್ಲಿ ತಗ್ಗಿಸಿದೆ. ಈ ವಿಧಾನಗಳು ಬೇಳೆ ಕಾಳು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ವಿಶೇಷವಾಗಿ ಹೆಚ್ಚು ಅಪೌಷ್ಟಿಕತೆ ಹೊಂದಿರುವ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಪೂರೈಕೆ ಮತ್ತು ಬೇಡಿಕೆ ಅಂತರವನ್ನು ಕಡಿಮೆಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಉತ್ಪಾದನಾ ಅಡಚಣೆಗಳನ್ನು ನೀಗಿಸಿ, ಜೈವಿಕ ಮತ್ತು ಅಜೈವಿಕ ತೊಂದರೆಗಳನ್ನು ತಡೆದುಕೊಂಡು ಮತ್ತು ಬೇಳೆಗಳ ತಳಿವಿಜ್ಞಾನದ ನೆಲೆಗಟ್ಟನ್ನು ವಿಸ್ತರಿಸುವುದು ಅಂತಾರಾಷ್ಟ್ರೀಯ ಬೇಳೆಗಳ ವರ್ಷ– 2016ರ ಚರ್ಚೆಯ ಮುಂದಿನ ಸವಾಲುಗಳು.

## ಕೃತಜ್ಞತೆ

ಇಲ್ಲುಪುರ್ ವ್ಯವಸಾಯೋತ್ಪನ್ನ ಕಂಪನಿ ಲಿಮಿಟೆಡ್ (ಐಎಪಿಸಿಎಲ್) ನೀಡಿದ ಸಹಕಾರ ಮತ್ತು  ಸಣ್ಣ ಹಿಡುವಳಿದಾರರಿಗೆ ಲಾಭವುಂಟುಮಾಡಲು ’ಬೇಳೆ ಪಂಚಾಯತ್ ಚಳವಳಿ’ಯನ್ನು ಮುಂದೆ ತೆಗೆದುಕೊಂಡು ಹೋದ ಅವರ ಬದ್ಧತೆಗೆ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇವೆ. ಒಸಿಪಿ ಫೌಂಡೇಷನ್, ಮೊರಾಕ್ಕೋ; ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ಮುಂಬೈ, ಏಷಿಯಾ ಇನಿಶಿಯೇಟಿವ್ಸ್, ಯುಎಸ್‌ಎ ಮತ್ತು ತಮಿಳುನಾಡು ಸರ್ಕಾರದ ಕೃಷಿ ವ್ಯವಹಾರ ಒಕ್ಕೂಟ (ಟಿಎನ್‌ಎಸ್‌ಎಫ್‌ಎಸಿ)ಗಳು ನೀಡಿದ ಆರ್ಥಿಕ ನೆರವಿಗೆ ತುಂಬು ಕೃತಜ್ಞತೆಗಳು. ಎಂಎಸ್ ಸ್ವಾಮಿನಾಥನ್ ಸಂಶೋಧನಾ ಫೌಂಡೇಷನ್ ಒದಗಿಸಿದ ಒಟ್ಟಾರೆ ಮಾರ್ಗದರ್ಶನ ಮೆಚ್ಚುವಂಥದ್ದು.

■ **R S Shanthakumar Hopper**
Director, Ecotechnology
M.S.Swaminathan Research Foundation,
3rd Cross Street, Taramani Institutional Area,
Chennai 600113
E-mail: hopper@mssrf.res.in

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 2, ಜೂನ್ 2016

ತಳಿ ಆಯ್ಕೆ ಪ್ರಯೋಗದಲ್ಲಿ ಭಾಗವಹಿಸುತ್ತಿರುವ ರೈತರು

ಚಿತ್ರ: ಲೇಖಕರು




Follow us on: www.facebook.com/Leisaindiamag @LeisaIndia